## ವಿಷಯಗಳು

ಪೀಠಿಕೆ ........ 2

ಗುಣಮಟ್ಟ ನೀತಿ ........ 3

ಯೆಸ್ ಬ್ಯಾಂಕಿನ ಶಾಖೆಗಳ ಪ್ರಮುಖ ವೈಶಿಷ್ಟ್ಯಗಳು ........ 3

ಶಾಖೆಗಳಲ್ಲಿ ಗ್ರಾಹಕ ಸೇವೆ ........ 3

ಎಸ್ಎಂಎಸ್ ಬ್ಯಾಂಕಿಂಗ್ ........ 4

ಗ್ರಾಹಕ-ಬ್ಯಾಂಕರ್ ಸಂಬಂಧದ ಸಾಮಾನ್ಯ ಕ್ಷೇತ್ರಗಳು ........ 6

ನಿಮ್ಮ ಗ್ರಾಹಕರ ಮಾರ್ಗಸೂಚಿಗಳನ್ನು ತಿಳಿದುಕೊಳ್ಳಿ ........ 9

ಚೆಕ್ ಕಲೆಕ್ಷನ್ ಸೇವೆಗಳು ........ 10

ಸುರಕ್ಷಿತ ಬ್ಯಾಂಕಿಂಗ್ ಅನುಭವಕ್ಕಾಗಿ ಉತ್ತಮ ಗ್ರಾಹಕರ ಅಭ್ಯಾಸಗಳು ........ 12

ವಿದೇಶೀ ವಿನಿಮಯ ಸೇವೆಗಳು ........ 15

## ಪೀಠಿಕೆ

ಯೆಸ್ ಬ್ಯಾಂಕಿನನಲ್ಲಿ, ಭಾರತವು ಅಧಿಕ ಶಾಖೆಗಳುಳ್ಳ ಆದರೆ ಸಮರ್ಪಕ ಬ್ಯಾಂಕಿಂಗ್ ಸೇವೆಯಲ್ಲಿರುವ ವಾತಾವರಣದಿಂದ ಕೂಡಿದೆ ಎಂದು ನಾವು ಯಾವಾಗಲೂ ನಂಬಿದ್ದೇವೆ. ಈ ನಂಬಿಕೆಯೇ ನಮಗೆ ಸೇವಾ ಗುಣಮಟ್ಟದಲ್ಲಿ ಅತ್ಯುತ್ತಮವಾದುದನ್ನು ಪ್ರತಿನಿಧಿಸುವ ಮತ್ತು ನಮ್ಮ ದೇಶದಲ್ಲಿ ಮತ್ತು ವಿದೇಶದಲ್ಲಿ ಮತ್ತು ವಿಶ್ವದಲ್ಲಿ ಸೇವಾ ಉತ್ಕೃಷ್ಟತೆಯ ಮಾನದಂಡವನ್ನು ಪೂರೈಸುವ ಬ್ಯಾಂಕ್ ಆಗಿ ಭಾರತೀಯ ಗ್ರಾಹಕರಿಗೆ ಒದಗಿಸುವ ಕನಸನ್ನು ಸಾಕಾರಮಾಡುವಂತೆ ಉತ್ತೇಜನ ನೀಡಿತು.

ಯೆಸ್ ಬ್ಯಾಂಕಿನ ನಲ್ಲಿ, ಸಾಮಾಜಿಕ-ಆರ್ಥಿಕ ಉದ್ದೇಶಗಳನ್ನು ಸಾಧಿಸಲು ಜವಾಬ್ದಾರಿಯುತ ಬ್ಯಾಂಕಿಂಗ್ ನಲ್ಲಿ ಮತ್ತು ಇನ್ನಷ್ಟು ಗ್ರಾಹಕರನ್ನು ಆ ಸಮೂಹಕ್ಕೆ ತರುವ ಪ್ರಕ್ರಿಯೆಯಲ್ಲಿ ನಾವು ಬಲವಾಗಿ ನಂಬಿಕೆ ಇಟ್ಟಿದ್ದೇವೆ. ಅತ್ಯುತ್ತಮ ಬ್ಯಾಂಕಿಂಗ್ ಅನುಭವವನ್ನು ನೀಡುವಲ್ಲಿ ಗ್ರಾಹಕರ ಸಂತೃಪ್ತಿಯೇ ಅತ್ಯಂತ ಪ್ರಮುಖವಾದ ಅಂಶವಾಗಿದೆ.

ಯೆಸ್ ಬ್ಯಾಂಕಿನ ನಾಗರಿಕರ ಸನ್ನದು ಕಲ್ಪನೆಯನ್ನು ಮೇಲಿನ ಅಗತ್ಯತೆಗಳನ್ನು ಪೂರೈಸಲು ಮೂಲ ಸಾಧನವಾಗಿ ಪರಿಗಣಿಸಲಾಗಿದೆ ಮತ್ತು ಅದೇ ರೀತಿಯಾಗಿ ಈ ದಾಖಲೆಯನ್ನು ತಯಾರಿಸಲಾಗಿದೆ. ಈ ದಾಖಲೆಯನ್ನು ಬಳಕೆದಾರರ ಸಲಹೆಯನ್ನು ಪಡೆದು ಸಿದ್ಧಪಡಿಸಲಾಗಿದೆ ಮತ್ತು ಇದು ಗ್ರಾಹಕರ ಸಂತೃಪ್ತಿಯತ್ತ ಬ್ಯಾಂಕಿನ ಬದ್ಧತೆಗಳು, ಮತ್ತು ಆ ಮೂಲಕ ಬ್ಯಾಂಕಿನ ಅಧಿಕಾರಗಳು ಮತ್ತು ಸಿಬ್ಬಂದಿಯ ಹೊಣೆಗಾರಿಕೆ ಮತ್ತು ಜವಾಬ್ದಾರಿಯನ್ನು ಎತ್ತಿ ತೋರಿಸುತ್ತದೆ. ಗ್ರಾಹಕರಿಗಾಗಿರುವ ಈ ಸನ್ನದು, ಕುಂದುಕೊರತೆಗಳ ನಿವಾರಣೆಯ ವಿಧಾನಗಳೊಂದಿಗೆ ನಮ್ಮ ಬದ್ಧತೆ ಮತ್ತು ಜವಾಬ್ದಾರಿಗಳನ್ನು ವಿವರಿಸುವುದರೊಂದಿಗೆ ಗ್ರಾಹಕ-ಬ್ಯಾಂಕರ್ ಸಂಬಂಧಗಳಲ್ಲಿ ಆರೋಗ್ಯಪೂರ್ಣ ಅಭ್ಯಾಸಗಳಿಗಾಗಿ ಗ್ರಾಹಕರ ಭಾಗದ ಕರ್ತವ್ಯವನ್ನೂ ಸಹ ನಿರ್ದಿಷ್ಟಪಡಿಸುತ್ತದೆ.

ತೃಪ್ತಿಕರವಾದ ಬ್ಯಾಂಕಿಂಗ್ ಅಭ್ಯಾಸಗಳಿಗೆ ಉತ್ತೇಜನ ನೀಡಲು ಮತ್ತು ಗ್ರಾಹಕ ಸೇವೆಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಲು ಸನ್ನದನ್ನು ತಯಾರಿಸಲಾಗಿದೆ.

ಹಲವು ವಿಚಾರ ಸಂಕಿರಣಗಳು, ಗ್ರಾಹಕರ ಸಮಾವೇಶಗಳು ಹಾಗೂ ಇತರವುಗಳ ಮೂಲಕ ಗ್ರಾಹಕರಿಗೆ ನೀಡುವ ಸೇವೆಗಳನ್ನು ವಿಮರ್ಶಿಸಲು, ಸುಧಾರಿಸಲು ಮತ್ತು ವಿಸ್ತರಿಸಲು ಹಾಗೂ ನಮ್ಮ ಸೇವಾ ಗುಣಮಟ್ಟಗಳನ್ನು ಸುಧಾರಿಸಲು ಮತ್ತು ನಮ್ಮ ಗ್ರಾಹಕರೊಂದಿಗೆ ಸತತವಾಗಿ ಸಂಪರ್ಕದಲ್ಲಿರಲು ನಾವು ಶ್ರಮಿಸುತ್ತೇವೆ. ಆದರೆ, ಬ್ಯಾಂಕು ಒದಗಿಸುವ ಹಲವು ಸೇವೆಗಳ ಕುರಿತಂತೆ ಅವರ ಅನುಭವಗಳ ಬಗ್ಗೆ ನಮಗೆ ಸದಾ ಮಾಹಿತಿ ನೀಡುತ್ತಿರಲು ನಮ್ಮ ಎಲ್ಲಾ ಗ್ರಾಹಕರಿಗೆ ಉತ್ತೇಜಿಸಲಾಗಿದೆ. ಮುಂದಿನ ವರ್ಷಗಳಲ್ಲಿ ಸನ್ನದನ್ನು ಹತ್ತು ಹಲವು ಪ್ರಾಂತೀಯ ಭಾಷೆಗಳಲ್ಲಿ ಹೊರತರಲು ನಾವು ಉದ್ದೇಶಿಸಿದ್ದೇವೆ.

ಸ್ಥಳ: __________ ದಿನಾಂಕ: ___________

ಅಧಿಕೃತರ ಸಹಿ

### ಗಮನಿಸಿ

ಈ ಪುಸ್ತಿಕೆಯಲ್ಲಿ ನೀಡಿರುವ ಮಾಹಿತಿಯು _________________ ರವರೆಗೆ ಆಗಿದ್ದು, ಇದು ಬದಲಾವಣೆ/ಪರಿಷ್ಕರಣೆಗೆ ಒಳಪಟ್ಟಿದೆ. ಈ ಪುಸ್ತಿಕೆಯಲ್ಲಿ ಹಕ್ಕುಗಳು ಮತ್ತು ನಿರ್ಬಂಧಗಳನ್ನು ರೂಪಿಸುವ ಕಾನೂನು ದಾಖಲೆಯಾಗಿ ಪರಿಗಣಿಸಬಾರದು. ಇದು ಗ್ರಾಹಕ ಮತ್ತು ಬ್ಯಾಂಕರ್ ನಡುವೆ ಉತ್ತಮ ತಿಳುವಳಿಕೆಯನ್ನು ಹೆಚ್ಚಿಸಲು ಆಗಿದೆ.

ಬ್ಯಾಂಕು ನೀಡುವ ವಿವಿಧ ಸೇವೆಗಳು/ಸೌಲಭ್ಯಗಳ ಬಳಕೆ ಮತ್ತು ಲಾಭಗಳ ಕುರಿತ ಪ್ರಮುಖ ಮಾಹಿತಿಯನ್ನು ಈ ಪುಸ್ತಿಕೆಯಲ್ಲಿ ನೀಡಲಾಗಿದೆ. ಯಾವುದೇ ಹೆಚ್ಚಿನ ವಿವರಗಳು/ಮಾಹಿತಿಗಾಗಿ, ನೀವು ನಮ್ಮ ವೆಬ್-ಸೈಟ್ www.yesbank.inಗೆ ಭೇಟಿ ನೀಡಬಹುದು ಅಥವಾ ನಮ್ಮ ಶಾಖಾ ಕಚೇರಿಗಳಿಗೆ ಭೇಟಿ ನೀಡಬಹುದು/ಕರೆ ಮಾಡಬಹುದು/ಬರೆಯಬಹುದು.

## ಗುಣಮಟ್ಟ ನೀತಿ

*"ಯೆಸ್ ಬ್ಯಾಂಕಿನ 'ಭಾರತದ ಭವಿಷ್ಯದ ವ್ಯವಹಾರಗಳಿಗೆ' ಪೂರೈಕೆ ಮಾಡಲು ಒಂದು ಉನ್ನತ ಗುಣಮಟ್ಟದ, ಗ್ರಾಹಕ ಕೇಂದ್ರೀಕೃತ, ಸೇವಾ ಪ್ರವೃತ್ತಿಯ, ಖಾಸಗೀ ಭಾರತದ ಬ್ಯಾಂಕ್ ಆಗಿ ಪ್ರತಿಸ್ಥಾಪಿತವಾಗುವ ತನ್ನ ಉದ್ದೇಶದಲ್ಲಿ ಅದ್ಭುತ ಕಾರ್ಯಾಚರಣೆ, ನಾವಿನ್ಯತೆ, ಪರಿಣಾಮಕಾರಿ ತಂತ್ರಜ್ಞಾನ ಹಾಗೂ ಅತ್ಯುತ್ತಮ ಗುಣಮಟ್ಟದ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳ ಮೂಲಕ ಉನ್ನತ ಸೇವಾ ಅನುಭವವನ್ನು ಒದಗಿಸುವ ಖಚಿತತೆಗಾಗಿ ಪ್ರಯತ್ನಿಸುತ್ತದೆ."*

ಉದ್ದೇಶಗಳು –

- ಹೆಚ್ಚಿನ ತೃಪ್ತಿಕರ ಮಟ್ಟ ಮತ್ತು ಗ್ರಾಹಕರಿಂದ ದೂರುಗಳ ಪ್ರಮಾಣದ ಇಳಿಕೆಯನ್ನು ಖಚಿತಪಡಿಸುವುದು
- ವಿಧಿಸಿದ ಮಾನದಂಡಗಳು ಮತ್ತು ಅನುಸರಣೆಯ ಪಾಲನೆ ಮತ್ತು ಪ್ರಕ್ರಿಯೆಗೊಳಿಸುವಿಕೆಯಲ್ಲಿ ಕನಿಷ್ಠ ದೋಷವನ್ನು ಖಚಿತಪಡಿಸುವುದು
- ಸ್ಪರ್ಧಾತ್ಮಕ ವ್ಯಕ್ತಿಗಳನ್ನು ನೇಮಕ ಮಾಡಿಕೊಳ್ಳುವುದು ಮತ್ತು ಗರಿಷ್ಠ ಉತ್ಪಾದಕತೆಯನ್ನು ಸಾಧಿಸಲು ಅವರಿಗೆ ಸತತವಾಗಿ ತರಬೇತಿ ನೀಡುವುದು
- ಗ್ರಾಹಕರು ಮತ್ತು ಉದ್ಯೋಗಿಗಳ ಪ್ರತಿಕ್ರಿಯೆಯನ್ನು ಆಧರಿಸಿ ಬದಲಾವಣೆಗೆ ಹೆಚ್ಚಿನ ಹೊಂದಾಣಿಕೆಯನ್ನು ಖಚಿತಪಡಿಸಿಕೊಳ್ಳುವುದು

## ಯೆಸ್ ಬ್ಯಾಂಕಿನ ಶಾಖೆಗಳ ಪ್ರಮುಖ ವೈಶಿಷ್ಟ್ಯಗಳು

- ವಿಚಾರಣೆಗಳು/ಸೇವಾ ಕೋರಿಕೆಗಳಿಗಾಗಿ ಮತ್ತು ಉನ್ನತ ಮಟ್ಟದ ಸೇವಾ ಅನುಭವವನ್ನು ಒದಗಿಸುವಂತೆ ಸತತವಾಗಿ ಪ್ರಯತ್ನಿಸಲು ಎಲ್ಲಾ ಶಾಖೆಗಳಲ್ಲಿ ಪ್ರತ್ಯೇಕವಾದ ***'ಎಸ್ ಫಾರ್ ಯು'*** ಕೌಂಟರ್ ಗಳಿವೆ
- ಎಲ್ಲಾ ಸಂದಾಯ ಖಾತೆಗಳಿಗೆ ನಾಮನಿರ್ದೇಶನ ಸೌಲಭ್ಯವನ್ನು ನೀಡಲಾಗುತ್ತದೆ (ಅಂದರೆ ವೈಯಕ್ತಿಕ ನೆಲೆಗಟ್ಟಿನಲ್ಲಿ ಮತ್ತು ಸ್ವಂತ ಮಾಲಿಕತ್ವದಲ್ಲಿ ತೆರೆದ ಖಾತೆಗಳು)
- ಸಮಯದಿಂದ ಸಮಯಕ್ಕೆ ವಿವಿಧ ಹೂಡಿಕೆ ಯೋಜನೆಗಳು/ಸೇವೆಗಳ ಬಗ್ಗೆ ವಿವರಗಳನ್ನು ಒದಗಿಸುವುದು
- ಹಿರಿಯ ನಾಗರಿಕರು, ನಿವೃತ್ತಿ ವೇತನದಾತರು, ಮಹಿಳೆಯರು ಮತ್ತು ಪಟ್ಟಣ ಮತ್ತು ಗ್ರಾಮೀಣ ಶಾಖೆಗಳಲ್ಲಿನ ಜನರಿಗೆ ಹೆಚ್ಚುವರಿ ಪ್ರಯೋಜನಗಳೊಂದಿಗೆ ಕನಿಷ್ಠ ದರದಲ್ಲಿ ಎಲ್ಲಾ ಗ್ರಾಹಕರಿಗೆ ಮೂಲಭೂತ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವುದು.
- ಪ್ರಮುಖವಾದ ಮೂಲಭೂತ ಬ್ಯಾಂಕಿಂಗ್ ಸೇವೆಗಳು ಇವುಗಳನ್ನು ಒಳಗೊಂಡಿದೆ – ಸಮಾನ ಪಾವತಿಸುವಿಕೆ (ಬಹುನಗರ ಚೆಕ್ ಪುಸ್ತಕ), ಯಾವುದೇ ಶಾಖೆ ಬ್ಯಾಂಕಿಂಗ್, ಎಸ್.ಎಮ್.ಎಸ್ ಸೂಚನೆಗಳು, ಇ-ಮೇಲ್ ಸೂಚನೆಗಳು, ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳು/ಸ್ಥಾಯಿ ಸೂಚನೆಗಳು, ಸೇವಾ ಬಿಲ್ ಪಾವತಿಗಳು, ಇಂಟರ್ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಇತರವುಗಳು.
- ಹಣ ರವಾನೆಯ ವಿವಿಧ ಆಯ್ಕೆಗಳನ್ನು ಒದಗಿಸುವುದು – ಡಿಮ್ಯಾಂಡ್ ಡ್ರಾಫ್ಟ್, ಪೇ ಆರ್ಡರ್ ಗಳು, ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ ಇತರೆ.
- ಶಾಖೆಯ ಹೊರಗಡೆ ಶಾಖೆಯ ವ್ಯವಹಾರ ಸಮಯವನ್ನು ಪ್ರದರ್ಶಿಸುವುದು
- ಚೆಕ್ ಡ್ರಾಪ್ ಪೆಟ್ಟಿಗೆಗಳಲ್ಲಿ ಕ್ಲಿಯರಿಂಗ್ ಗಡುವಿನ ಅವಧಿಯನ್ನು ಪ್ರದರ್ಶಿಸುವುದು
- ಕಾಲಕಾಲಕ್ಕೆ ವಿವಿಧ ಠೇವಣಿ ಯೋಜನೆಗಳಿಗೆ ಅನ್ವಯಿಸುವ ಬಡ್ಡಿ ದರಗಳನ್ನು ಪ್ರದರ್ಶಿಸುವುದು
- ವಿವಿಧ ಮೂಲಭೂತ ಬ್ಯಾಂಕಿಂಗ್ ಸೇವೆಗಳು ಮತ್ತು ಇತರ ಕಲೆಕ್ಷನ್, ಪಾವತಿಗಳು ಮತ್ತು ಬ್ಯಾಂಕು ಒದಗಿಸುವ ಇತರ ಸೇವೆಗಳ ವಿವರಗಳೊಂದಿಗೆ ನಿಗದಿತ ದರಗಳನ್ನು ಪ್ರದರ್ಶಿಸುವುದು
- ದೂರು/ಸಲಹೆ ಪೆಟ್ಟಿಗೆಯನ್ನು ಒದಗಿಸುವುದು ಮತ್ತು ಸತತವಾಗಿ ನಮ್ಮ ಸೇವೆಗಳನ್ನು ಸುಧಾರಿಸಲು ಪ್ರತಿಕ್ರಿಯೆ ನೀಡಲು ಉತ್ತೇಜನ ನೀಡುವುದು
- ಗ್ರಾಹಕರ ಕುಂದುಕೊರತೆಗಳು/ದೂರುಗಳನ್ನು ನಿರ್ವಹಿಸುವ ಪ್ರಾಂತೀಯ/ಕೇಂದ್ರ ಕಚೇರಿಯ ವಿಳಾಸವನ್ನು ಪ್ರದರ್ಶಿಸುವುದು

## ಶಾಖೆಗಳಲ್ಲಿ ಗ್ರಾಹಕ ಸೇವೆ

ಶಾಖೆಗಳಲ್ಲಿ ಅತ್ಯುತ್ತಮ ಮತ್ತು ನಿರಂತರ ಸೇವೆಯನ್ನು ಮತ್ತು ಗ್ರಾಹಕ ಅನುಕೂಲಗಳನ್ನು ಒದಗಿಸಲು ನಾವು ಕೆಳಗಿನ ಅಂಶಗಳನ್ನು ಖಚಿತಪಡಿಸುತ್ತೇವೆ:-

- ಶಾಖೆಗಳಲ್ಲಿ, ವಿಶೇಷವಾಗಿ ಹಿರಿಯ ನಾಗರಿಕರನ್ನು ಮತ್ತು ಅಂಗವಿಕಲರನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪೀಠೋಪಕರಣ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳೊಂದಿಗೆ ಸಾಕಷ್ಟು ಸ್ಥಳವಕಾಶ.
- ಆಯ್ದ ಶಾಖೆಗಳಲ್ಲಿ ನಾನು ನಿಮಗೆ ಸಹಾಯ ಮಾಡಲೆ (ನಿಮಗಾಗಿ ಯೆಸ್) ಡೆಸ್ಕ್ಸ್ ಅನ್ನು ಒದಗಿಸಲಾಗುತ್ತದೆ
- ಶಾಖೆಗಳಲ್ಲಿ ಸೂಕ್ತ ಸೂಚನೆಗಳನ್ನು ಇಂಗ್ಲೀಷ್, ಹಿಂದಿ ಮತ್ತು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸಲಾಗುತ್ತದೆ
- ಎಲ್ಲ ಶಾಖೆಗಳಲ್ಲಿ ಗ್ರಾಹಕರು ನಮ್ಮೊಂದಿಗೆ ಸಂವಹನ ನಡೆಸಲು ತ್ರಿಭಾಷಾ ಕೌಂಟರುಗಳ ಪಾತ್ರಗಳನ್ನು ಪ್ರದರ್ಶಿಸಲಾಗುತ್ತದೆ
- ಗ್ರಾಹಕರಿಗೆ ನೌಕರರ ಪ್ರತಿಕ್ರಿಯೆಯನ್ನು ಖಚಿತಪಡಿಸಲು ಮತ್ತು ಗ್ರಾಹಕರು ತಮ್ಮ ವ್ಯವಹಾರಗಳನ್ನು ನಡೆಸುವುದಕ್ಕೆ ಸಹಾಯ ನೀಡುವಂತೆ ಅಧಿಕಾರಿಗಳಿಗೆ ಸಾಕಷ್ಟು ತರಬೇತಿಯನ್ನು ನೀಡಲಾಗುತ್ತದೆ

- ಬ್ಯಾಂಕಿನಲ್ಲಿ ಲಭ್ಯವಿರುವ ಸೇವೆ ಮತ್ತು ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕೈಪಿಡಿಗಳನ್ನು ಹಿಂದಿ, ಇಂಗ್ಲೀಶ್ ಮತ್ತು ಸಂಬಂಧಿಸಿದ ಪ್ರಾದೇಶಿಕ ಭಾಷೆಗಳಲ್ಲಿ ಗ್ರಾಹಕರಿಗೆ ಒದಗಿಸಲಾಗುತ್ತದೆ
- ನೌಕರರು ಮತ್ತು ಸಾರ್ವಜನಿಕರಲ್ಲಿ ಆತ್ಮವಿಶ್ವಾಸವನ್ನು ತುಂಬಲು ಶಾಖೆಗಳಲ್ಲಿ ಸೂಕ್ತ ಭದ್ರತೆ
- ಎಲ್ಲ ನೌಕರರಿಗೆ ತಮ್ಮ ಫೋಟೋ ಮತ್ತು ಹೆಸರನ್ನು ಹೊಂದಿರುವ ಗುರುತಿನ ಬ್ಯಾಡ್ಜ್ ಒಂದನ್ನು ವಿತರಿಸಲಾಗುತ್ತದೆ
- ಡೆಸ್ಕ್ ನಲ್ಲಿ ನಿಯತಕಾಲಿಕವಾಗಿ ಬದಲಾವಣೆ ಮತ್ತು ಪ್ರಾಥಮಿಕ ಮೇಲ್ವಿಚಾರಣಾ ಕೆಲಸಗಳ ನಿಯೋಜನೆ
- ಶಾಖೆಗಳು ಒದಗಿಸಲಾಗುತ್ತಿರುವ ಸೇವೆಗಳ ಗುಣಮಟ್ಟಗಳನ್ನು ತಕ್ಷಣಕ್ಕೆ ಅಧ್ಯಯನ ಮಾಡಲು ಕಾಲಕಾಲಕ್ಕೆ ಮಧ್ಯಂತರ ಅವಧಿಗಳಲ್ಲಿ ಪ್ರಾದೇಶಿಕ/ ಪ್ರಧಾನ ಕಚೇರಿಯ ಹಿರಿಯ ಅಧಿಕಾರಿಗಳಿಂದ ಭೇಟಿ
- ಗ್ರಾಹಕ ಸೇವಾ ದೃಷ್ಟಿ ಕೋನದಿಂದ ವಾರ್ಷಿಕ ಪ್ರಶಸ್ತಿಗಳು/ಆವರ್ತನ ಶೀಲ್ಡ್ ಗಳಿಂದ ಅತ್ಯುತ್ತಮ ಶಾಖೆಗಳನ್ನು ಪುರಸ್ಕರಿಸುವುದು
- ನಿಯತಕಾಲಿಕ ಗ್ರಾಹಕ ಸೇವಾ ಸಭೆಗಳು, ಆಡಿಟ್ ಮತ್ತು ಗ್ರಾಹಕ ತೃಪ್ತಿ ಸಮೀಕ್ಷೆಗಳು

**'ಯೆಸ್ ಟಚ್' ನೇರ ಬ್ಯಾಂಕಿಂಗ್ ಮಾಧ್ಯಮಗಳ ವೈಶಿಷ್ಟ್ಯಗಳು**

ನಮ್ಮೊಂದಿಗೆ ವ್ಯವಹಾರ ನಡೆಸಲು ಬಹು ಪ್ರಕಾರದ ಪರ್ಯಾಯ ಮತ್ತು ಸುಲಭವಾದ ಮಾರ್ಗಗಳನ್ನು ಒದಗಿಸುತ್ತದೆ –

**ರಿಟೇಲ್ ನೆಟ್ ಬ್ಯಾಂಕಿಂಗ್**

- 'ಎರಡು ಹಂತದ ಸುರಕ್ಷತೆ/ಪ್ರಮಾಣೀಕರಣ' ವು ಯಾವುದೇ ಸಂಭಾವ್ಯ ದುರ್ಬಳಿಕೆಯನ್ನು ತಡೆಗಟ್ಟುತ್ತದೆ ಮತ್ತು ವರ್ಧಿತ ರಕ್ಷಣೆಯ ಹಂತವನ್ನು ಒದಗಿಸುತ್ತದೆ –
    - ವೈಯಕ್ತಿಕ ಗ್ರಾಹಕರು – ಇಂಟರ್ನೆಟ್ ಬ್ಯಾಂಕಿಂಗ್ ನಲ್ಲಿ ಎಲ್ಲಾ ವಹಿವಾಟುಗಳಿಗೆ, ಗ್ರಾಹಕರ ನೋಂದಾಯಿತ ಮೊಬೈಲ್ ಫೋನ್ ಗೆ ಒಂದು ಬಾರಿ ಪಾಸವರ್ಡ್ ಅನ್ನು ಕಳುಹಿಸಲಾಗುತ್ತದೆ
    - ವೈಯಕ್ತಿಕವಲ್ಲದ ಗ್ರಾಹಕರಿಗೆ – ಪ್ರತಿ ಲಾಗ್ ಇನ್ ಅವಧಿಗೆ, ಒಂದು ಬಾರಿಯ ಪಾಸವರ್ಡ್ ಅನ್ನು ರಚಿಸಬಹುದು
- ವೈಯಕ್ತಿಕ ಗ್ರಾಹಕರಿಗೆ 'ಏಕ ಪಿನ್ ಪ್ರವೇಶ' – ಡೆಬಿಟ್/ಏಟಿಎಮ್' ಕಾರ್ಡ್ ಪಿನ್ ಅನ್ನು ಇವುಗಳಿಗೆ ಬಳಸಲು ಕ್ರಿಯಾತ್ಮಕಗೊಳಿಸುತ್ತದೆ
    - ಇಂಟರ್ನೆಟ್ ಬ್ಯಾಂಕಿಂಗ್ ಗೆ ಮೊದಲ ಬಾರಿಯ ನೋಂದಾವಣಿ
    - ನೀವು ಒಂದು ವೇಳೆ ಮರೆತರೆ ಪಾಸವರ್ಡ್ ಪುನರ್ ರಚನೆ
- ಇಂಟರ್ನೆಟ್ ಬ್ಯಾಂಕಿಂಗ್ ಮುಖಾಂತರ ನೀಡಲಾಗುವ ಪ್ರಮುಖ ಸೇವೆಗಳು ಇವುಗಳನ್ನು ಒಳಗೊಂಡಿರುತ್ತದೆ –
    - ನಿಶ್ಚಿತ ಠೇವಣಿ ಮತ್ತು ಆವರ್ತನ ಠೇವಣಿಯ ಆನ್ ಲೈನ್ ಬುಕಿಂಗ್
    - ಸೇವಾ ಬಿಲ್ ಪಾವತಿಗಳಿಗೆ ನೋಂದಾವಣಿ
    - **ಎಂ.ಎಫ್. ಆನ್ಲೈನ್** ಸೇವೆಗಳ ಮೂಲಕ ತೊಂದರೆ-ಮುಕ್ತ ಕಾಗದ ರಹಿತ ಸೇವೆ, ಆಯ್ದ ಪ್ರಮುಖ ಫಂಡ್ ಹೌಸಸ್ ಯೋಜನೆಗಳಲ್ಲಿ ವ್ಯವಹಾರ ಮಾಡಲು ಒಂದು ಪೂರಕ ಸೌಲಭ್ಯ
    - ಆನಲೈನ್ ಶಾಪಿಂಗ್/ಪ್ರಯಾಣದ ಬುಕ್ಕಿಂಗ್
    - ಯೆಸ್ ಬ್ಯಾಂಕಿನ /ಟ್ರೇಡಿಂಗ್ ಖಾತೆಗಳಿಗೆ ಹಣ ವರ್ಗಾವಣೆ
    - ಎನ್.ಇ.ಎಫ್.ಟಿ/ಆರ್.ಟಿ.ಜಿ.ಎಸ್ ಖಾತೆಗಳ ಮೂಲಕ ಯೆಸ್ ಬ್ಯಾಂಕಿನ ಅಲ್ಲದ ಖಾತೆಗಳಿಗೆ ಹಣ ವರ್ಗಾವಣೆಗಳು
    - ಡಿಮ್ಯಾಂಡ್ ಡ್ರಾಫ್ಟ್ ಗಳ ನೀಡುವಿಕೆ
    - ಖಾತೆ ಲೆಕ್ಕಪಟ್ಟಿಗಳ ನೀಡುವಿಕೆ
    - ವೈಯಕ್ತಿಕ ಮತ್ತು ಖಾತೆ ಮಾಹಿತಿ
    - ಎಸ್.ಎಮ್.ಎಸ್/ಇ-ಮೇಲ್ ಸೂಚನೆಗಳ ಚಂದಾದಾರಿಕೆ/ಮಾರ್ಪಡಣೆ
    - ಮೌಲ್ಯಾಧಾರಿತ ಸೇವೆಗಳಾದ, ಇಮೇಲ್ ಸ್ಟೇಟ್ಮೆಂಟ್ ನೋಂದಣಿ, ವೈಯಕ್ತೀಕರಿಸಿದ ಡಿಪಾಸಿಟ್ ಸ್ಲಿಪ್, ನಿಮ್ಮ ಎಎಂಬಿ ತಿಳಿದುಕೊಳ್ಳಿ, ರಿಮೈಂಡ್ ಮಿ ಸೇವೆಗಳಿಗಾಗಿ ಮೈಸ್ಪೇಸ್
    - ಹಣ ಮೇಲ್ವಿಚಾರಣೆ – ವಿವಿಧ ಬ್ಯಾಂಕ್ ಖಾತೆಗಳು, ಬ್ರೋಕರೇಜ್ ಖಾತೆಗಳು, ಫ್ರೀಕ್ವೆಂಟ್ ಫ್ಲೈಯರ್ ಖಾತೆಗಳು ಹಾಗೂ ಇತರವುಗಳಾದ್ಯಂತ ಖಾತೆ ಒಂದುಗೂಡಿಸುವಿಕೆ.

**ಮೊಬೈಲ್ ಬ್ಯಾಂಕಿಂಗ್**

- ಎಸ್ ಬ್ಯಾಂಕ್ ರಿಟೇಲ್ ನೆಟ್ವರ್ಕಿಂಗ್‌ಗಾಗಿ ನೋಂದಾಯಿಸಿದ ಗ್ರಾಹಕರು, ಮೊಬೈಲ್ ಬ್ಯಾಂಕಿಂಗ್ ಅನ್ನು **'YESMOB'** ಎಂದು ಟೈಪ್ ಮಾಡಿ ತಾವು ಎಸ್ ಬ್ಯಾಂಕಿಗೆ ನೋಂದಾಯಿಸಿದ ಮೊಬೈಲ್ ಸಂಖ್ಯೆಯಿಂದ **567678** ಕ್ಕೆ ಎಸ್ಎಂಎಸ್ ಕಳುಹಿಸಿ ಮೊಬೈಲ್ ಬ್ಯಾಂಕಿಂಗ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಬಳಸಲು ಪ್ರಾರಂಭಿಸಬಹುದು

- ಮೊಬೈಲ್ ಬ್ಯಾಂಕಿಂಗ್ ಮುಖಾಂತರ ನೀಡಲಾಗುವ ಪ್ರಮುಖವಾದ ಸೇವೆಗಳು ಇವುಗಳನ್ನು ಒಳಗೊಂಡಿರುತ್ತದೆ -
    - ಶಿಲ್ಕು ವಿಚಾರಣೆ
    - ಮಿನಿ ಸ್ಟೇಟಮೆಂಟ್

- ನೀಡಲಾದ ಚೆಕ್ಕುಗಳ ಪಾವತಿ ತಡೆ ಹಿಡಿಯುವಿಕೆ
- ಚೆಕ್ ಸ್ಥಿತಿಗತಿ ವಿಚಾರಣೆ
- ಚೆಕ್ ಬುಕ್ ನೀಡಲು ವಿನಂತಿ
- ಎಸ್ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ
- ಎನ್‌ಇಎಫ್‌ಟಿ/ಐಎಂಪಿಎಸ್ ಮೂಲಕ ಎಸ್ ಬ್ಯಾಂಕ್ ಅಲ್ಲದ ಖಾತೆಗಳಿಗೆ ಹಣ ವರ್ಗಾವಣೆ
- ಖಾತೆ ಸ್ಟೇಟಮೆಂಟ್‌ಗಳು
- ಮುದ್ದತಿ ಠೇವಣಿ ವಿವರಗಳ ವಿಚಾರಣೆ
- ಪ್ರಿಪೇಡ್ ಮೊಬೈಲ್ ರಿಚಾರ್ಜ್, ಡಿಟಿಎಚ್ ಮತ್ತು ಬಿಲ್ ಪಾವತಿಗಳಂತಹ ಮರ್ಚಂಟ್ ಸೇವೆಗಳು

**ಎಸ್‌ಎಂಎಸ್ ಬ್ಯಾಂಕಿಂಗ್**

ಎಲ್ಲಾ ಎಸ್‌ಎಮ್‌ಎಸ್ ಬ್ಯಾಂಕಿಂಗ್ ಅಗತ್ಯಗಳಿಗೆ ಒಂದೇ ಸಂಖ್ಯೆ (+91-9840909000),ಗ್ರಾಹಕರಿಗೆ ಮಹತ್ವದ ಖಾತೆ ಮಾಹಿತಿಯನ್ನು 24x7 ಪಡೆದುಕೊಳ್ಳಲು ಸಕ್ರಿಯಗೊಳಿಸುತ್ತದೆ.

| | | |
|---|---|---|
| ಮೊಬೈಲ್ ನೋಂದಾವಣೆ | YESREG | YESREG <Customer ID> |
| ಖಾತೆ ಶಿಲ್ಕು ವಿಚಾರಣೆ | YESBAL | YESBAL <Customer ID> |
| ಖಾತೆಯಲ್ಲಿ ಕೊನೆಯ 5 ದಿನಗಳ ವ್ಯವಹಾರಗಳು | YESTXN | YESTXN <Customer ID> |
| ಚೆಕ್ ಸ್ಥಿತಿ ವಿಚಾರಣೆ | YESCST | YESCST <Customer ID><cheque number> |
| ಚೆಕ್ ನಿಲುಗಡೆ ವಿನಂತಿ | YESSTP | YESSTP <Customer ID><cheque number> |
| ಚೆಕ್‌ಬುಕ್ ವಿನಂತಿ | YESCHQ | YESCHQ <Customer ID> |
| ಖಾತೆಗೆ ಲಿಂಕ್ ಮಾಡಲಾದ ನಿಶ್ಚಿತ ಠೇವಣಿ | YESFDQ | YESFDQ <Customer ID> |
| ಖಾತೆ ವಿವರಣೆ ವಿನಂತಿ | YESSTM | YESSTM <Customer ID> |
| ಮೇಲಿನ ಎಲ್ಲಾ ಬೆಂಬಲಿತ ವಿನಂತಿಗಳ ಪಟ್ಟಿ | YESHLP | YESHLP <Customer ID> |

ಒಂದೇ ಗ್ರಾಹಕ ಐಡಿಗೆ ಬಹು ಖಾತೆಗಳನ್ನು ಲಿಂಕ್ ಮಾಡಿದ್ದಲ್ಲಿ, ದಯವಿಟ್ಟು ವಿನಂತಿಗಳ ಕೊನೆಯಲ್ಲಿ ಸಂಬಂಧಿಸಿದ ಖಾತೆಯ ಸಂಖ್ಯೆಯನ್ನು ಒದಗಿಸಿ. ಉದಾಹರಣೆಗೆ: YESSTP <Cust ID><Cheque No.><Account No.>

**ಮಿಸ್ಡ್ ಕಾಲ್ ಬ್ಯಾಂಕಿಂಗ್**

ನೀವು ಮಿಸ್ಡ್ ಕಾಲ್ ಬ್ಯಾಂಕಿಂಗ್ ಗಾಗಿ ನಿಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ "YESREG <Cust ID>" ಟೈಪ್ ಮಾಡಿ (+91-9840909000) ಗೆ ಎಸ್‌ಎಂಎಸ್ ಕಳುಹಿಸಿ ನೋಂದಾಯಿಸಬಹುದು

- 09223920000 ಗೆ ಒಂದು ಮಿಸ್ಡ್ ಕಾಲ್ ಮಾಡಿ ನಿಮ್ಮ ಖಾತೆಯ ಶಿಲ್ಕನ್ನು ತಿಳಿದುಕೊಳ್ಳಿ
- 09223921111 ಗೆ ಒಂದು ಮಿಸ್ಡ್ ಕಾಲ್ ಮಾಡಿ ಕೊನೆಯ 5 ವ್ಯವಹಾರಗಳ ಪಟ್ಟಿಯನ್ನು ಪಡೆಯಿರಿ

**ದಯವಿಟ್ಟು ಗಮನಿಸಿ:-**

- ಬಹು ಖಾತೆಗಳನ್ನು ಲಿಂಕ್ ಮಾಡಿದ ಪ್ರಸಂಗದಲ್ಲಿ, ಮಿಸ್ಡ್ ಕಾಲ್ ಮಾಡಿದಾಗ ಎಲ್ಲಾ ಖಾತೆಗಳ ಶಿಲ್ಕನ್ನು ಕಳುಹಿಸಲಾಗುತ್ತದೆ, ಆದರೆ ಕೊನೆಯ 5 ವ್ಯವಹಾರಗಳನ್ನು ಕೇವಲ ಪ್ರಾಥಮಿಕ ಖಾತೆ ಸಂಖ್ಯೆಗಾಗಿ ಮಾತ್ರ ಕಳುಹಿಸಲಾಗುತ್ತದೆ
- ಮಿಸ್ಡ್ ಕಾಲ್ ಬ್ಯಾಂಕಿಂಗ್ ನಲ್ಲಿ ಪ್ರಾಥಮಿಕ ಖಾತೆಯ ಸಂಖ್ಯೆಯನ್ನು ಬದಲಾಯಿಸಲು, ದಯವಿಟ್ಟು YESDEF <Cust ID><Account No.> ಯನ್ನು (+91-9840909000) ಗೆ ಎಸ್‌ಎಂಎಸ್ ಮಾಡಿ
- ನಿಮ್ಮ ಮೊಬೈಲ್ ಸಂಖ್ಯೆಯನ್ನು ಬಹು ಗ್ರಾಹಕ ಐಡಿಗಳಿಗೆ ನೋಂದಾಯಿಸಲಾಗಿದ್ದರೆ, ನೀವು ಈ ಸೇವೆಯನ್ನು ಪಡೆಯಲು ಸಾಧ್ಯವಾಗದು

**ಎಟಿಎಂ ಮತ್ತು ಡೆಬಿಟ್/ಎಟಿಎಂ ಕಾರ್ಡುಗಳು**

- ಜಗತ್ತಿನಾದ್ಯಂತ ಪಾಲುದಾರ ಬ್ಯಾಂಕ್ ಎಟಿಎಂಗಳು – ಎನ್.ಎಫ್.ಎಸ್ ವೀಸಾ ಮತ್ತು ಮಾಸ್ಟರ್ ಕಾರ್ಡ್ ನೆಟ್ವರ್ಕ್ ಗಳನ್ನು ಒಳಗೊಂಡಿರುತ್ತದೆ
- ಯೆಸ್ ಬ್ಯಾಂಕಿನ ಎಟಿಎಂಗಳಲ್ಲಿ ನೀಡಲಾಗುವ ಪ್ರಮುಖ ಸೇವೆಗಳು ಈ ಕೆಳಗಿನಂತಿವೆ -
    - ಚೆಕ್ ಜಮೆಗಳು
    - ಶಿಲ್ಕು ವಿಚಾರಣೆ
    - ಮಿನಿ ಸ್ಟೇಟಮೆಂಟ್‌ಗಳು
    - ಚೆಕ್ ಬುಕ್ ನೀಡಲು ವಿನಂತಿ
    - ಖಾತೆ ಸ್ಟೇಟಮೆಂಟ್‌ಗಳು
    - ಪಿನ್ ಬದಲಾವಣೆ
    - ನಿಶ್ಚಿತ ಠೇವಣಿ ತೆರೆಯುವುದು

- ಲೀಡ್ ಜನರೇಶನ್ (ವಾಯ್‌ಬಿಎಲ್ ಅಲ್ಲದ ಗ್ರಾಹಕರಿಗೆ)
    - ಟಾಟಾ ಸ್ಕಾಯ್ ಡಿಟಿಎಚ್ ರಿಚಾರ್ಜ್
    - ಮೊಬೈಲ್ ರಿಚಾರ್ಜ್
- ವಿಶ್ವದಾದ್ಯಂತ ಎಲ್ಲಾ ಪಾಲುದಾರರ ಬ್ಯಾಂಕ್ ಎಟಿಎಂಗಳಲ್ಲಿ ನೀಡಲಾಗುವ ಪ್ರಮುಖ ಸೇವೆಗಳೆಂದರೆ
    - ನಗದು ಹಿಂಪಡೆಯುವಿಕೆಗಳು
    - ಶಿಲ್ಕು ವಿಚಾರಣೆ
    - ಪಿನ್ ಬದಲಾವಣೆ
- ಡೆಬಿಟ್ ಕಾರ್ಡನ್ನು ಎಟಿಎಂಗಳಿಂದ ನಗದು ಪಡೆದುಕೊಳ್ಳಲು ಮತ್ತು ಶಾಪಿಂಗ್ ಟರ್ಮಿನಲ್ಸ್ ಮೂಲಕ ಪಾವತಿ ಮಾಡಲು ಬಳಸಬಹುದು
  ಪಿಓಎಸ್ ಟರ್ಮಿನಲ್ಸ್) ಪೇಮೆಂಟ್ ಗೇಟ್‌ವೇಗಳು

**ಕ್ರೆಡಿಟ್ ಕಾರ್ಡ್**

ಎಸ್ ಬ್ಯಾಂಕ್ ಕ್ರೆಡಿಟ್ ಕಾರ್ಡುಗಳು ಅದ್ಭುತ ವೈಶಿಷ್ಟ್ಯ ಮತ್ತು ಅದ್ವಿತೀಯ ಪ್ರಯೋಜನಗಳ ಆತಿಥ್ಯಗೊಂದಿಗೆ ಬರುತ್ತವೆ! ಅವುಗಳಲ್ಲಿ ಕೆಲವುಗಳೆಂದರೆ:

- ನಿಮ್ಮ ಜೀವನ ಶೈಲಿಯ ಅಗತ್ಯಗಳಿಗೆ ಸರಿಹೊಂದುವ ಕ್ರೆಡಿಟ್ ಕಾರ್ಡುಗಳ ವ್ಯಾಪ್ತಿ
- ರಿವಾಲ್ವಿಂಗ್ ಕ್ರೆಡಿಟ್ ಮೇಲೆ ಅತ್ಯುತ್ತಮ ಬಡ್ಡಿ ದರಗಳು
- ಎಂದಿಗೂ ಅವಧಿ ಮೀರದ ರಿವಾರ್ಡ್ ಪಾಯಿಂಟುಗಳೊಂದಿಗೆ ಸಾಟಿಯಿಲ್ಲದ ರಿವಾರ್ಡ್ಸ್ ಪ್ರೊಗ್ರಾಮ್
- ಭಾರತದ ಎಲ್ಲಾ ಫ್ಯುಯೆಲ್ ಸ್ಟೇಶನ್ ಗಳಲ್ಲಿ ಫ್ಯುಯೆಲ್ ಸರ್ಚಾರ್ಜ್ ಮನ್ನಾ

**ಗ್ರಾಹಕ-ಬ್ಯಾಂಕರ್ ಸಂಬಂಧದ ಸಾಮಾನ್ಯ ಕ್ಷೇತ್ರಗಳು**

**ಉಳಿತಾಯ ಬ್ಯಾಂಕ್ ಖಾತೆ**

- ಉಳಿತಾಯ ಖಾತೆಗಳನ್ನು ವೈಯಕ್ತಿಕ ಗ್ರಾಹಕರಲ್ಲಿ ಹಣ ಉಳಿಸುವ ಹವ್ಯಾಸವನ್ನು ಬೆಳೆಸಲು ಮತ್ತು ಅವರ ಭವಿಷ್ಯತ್ತಿನಲ್ಲಿ ಹಣದ ಅಗತ್ಯವನ್ನು ಪೂರೈಸಿಕೊಳ್ಳಲು ಸಹಾಯಮಾಡುವಂತೆ ವಿನ್ಯಾಸಗೊಳಿಸಲಾಗಿದೆ
- ಈ ಖಾತೆಗಳಿಂದ ಹಣವನ್ನು ರೆಮಿಟನ್ಸ್/ಚೆಕ್/ಡೆಬಿಟ್/ಎಟಿಎಂ ಕಾರ್ಡ್/ಇಂಟರ್ನೆಟ್ ಬ್ಯಾಂಕಿಂಗ್ ಮೂಲಕ ಜಮೆಮಾಡಬಹುದು/ಹಿಂಪಡೆಯಬಹುದು
- ಖಾತೆಗಳನ್ನು ಟ್ರಸ್ಟ್/ಸೊಸಾಯಿಟಿಗಳಿಂದ ತೆರೆಯಬಹುದು (ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ) ಅನುಮೋದನೆಯಂತೆ)
- 1ನೇ ಸಪ್ಟಂಬರ್ 2017 ರಿಂದ ಕೆಳಗಿನ ಬಡ್ಡಿ ದರಗಳು ದೈನಂದಿನ ಮುಕ್ತಾಯ ಶಿಲ್ಕುಗಳ ಮೇಲೆ ಅನ್ವಯವಾಗುತ್ತವೆ ಮತ್ತು ತ್ರೈಮಾಸಿಕ ಆಧಾರದ ಮೇಲೆ ಪಾವತಿಸಲಾಗುತ್ತದೆ, ಆದರೆ ಅದು ಕನಿಷ್ಟ ರೂ ಆಗಿರಬೇಕು 1/-.

| ಉಳಿತಾಯಗಳ ಶಿಲ್ಕುಗಳು | ಬಡ್ಡಿಯ ದರಗಳು ಅನ್ವಯಿಸುವ ದಿನಾಂಕ 1ನೇ ಸೆಪ್ಟಂಬರ್'17 |
|---|---|
| ರೂ.1 ಲಕ್ಷಕ್ಕಿಂತ ಕಡಿಮೆ | 5% ಪ್ರ.ವ. |
| 1 ಲಕ್ಷದಿಂದ 1 ಕೋಟಿಯ ಒಳಗೆ | 6% ಪ್ರ.ವ. |
| 1 ಕೋಟಿ ಮತ್ತು ಹೆಚ್ಚಿಗೆ | 6.25% ಪ್ರ.ವ. |

ರೂ. 100 ಕೋಟಿಗೂ ಮೀರಿದ ಮೊಬಲಗುಗಲಿಗಾಗಿ, ದಯವಿಟ್ಟು ಬ್ರಾಂಚನ್ನು ಅಥವಾ ನಿಮ್ಮ ಸೂಚಿತ ರಿಲೇಶನ್‌ಶಿಪ್ ಮೆನೇಜರ್‌ರನ್ನು ಸಂಪರ್ಕಿಸಿರಿ. ದರಗಳು ಯೆಸ್ ಬ್ಯಾಂಕ್‌ನ ಏಕೈಕ ನಿಷ್ಕರ್ಷೆಯ ಮೇರೆಗೆ ಬದಲಾಗುವುದು ಸಾಧ್ಯವಿದೆ. ಷರತ್ತುಗಳು ಅನ್ವಯಿಸುತ್ತವೆ.

- ಇಕ್ವಿಟಿ ಮತ್ತು ಡೆಟ್ ಸಾರ್ವಜನಿಕ ಬಿಡುಗಡೆಯ ಎಎಸ್‌ಬಿಎ ಅಪ್ಲಿಕೇಶನ್ ಅನ್ನು ಖಾತೆಯಿಂದ ಸಲ್ಲಿಸಬಹುದು.
- ಖಾತೆದಾರ(ರ) ಹೆಸರಲ್ಲಿ ಬರೆದ ಚೆಕ್ ಗಳು, ಡಿವಿಡೆಂಡ್ ವಾರಂಟ್ ಗಳನ್ನು ಮಾತ್ರ ಈ ಖಾತೆಯಿಂದ ಸಂಗ್ರಹಿಸಲಾಗುತ್ತದೆ. ಖಾತೆದಾರ(ರ) ಪರವಾಗಿ ಎಂಡಾರ್ಸ್ ಮಾಡಲಾದ ಹಣಕಾಸು ದಸ್ತಾವೇಜುಗಳನ್ನು ಸಂಗ್ರಹಿಸಲಾಗುವುದಿಲ್ಲ
- ಯಾವುದೇ ಗ್ರಾಹಕ ತನ್ನ ಖಾತೆಯ ಮೂಲಕ ನಿರಂತರವಾಗಿ 2 ವರ್ಷಗಳ ವರೆಗೆ ಯಾವುದೇ ವ್ಯವಹಾರ ಮಾಡದಿದ್ದಲ್ಲಿ ಆ ಖಾತೆಯನ್ನು ನಿಷ್ಕ್ರಿಯ ಖಾತೆಯೆಂದು ಪರಿಗಣಿಸಲಾಗುತ್ತದೆ
- ಸಮಯದಿಂದ ಸಮಯಕ್ಕೆ ಬ್ಯಾಂಕಿನ ನಿಗದಿತ ದರಗಳ ಪಟ್ಟಿಯಲ್ಲಿ ನಿರ್ದಿಷ್ಟ ಪಡಿಸಲಾದಂತೆ ಖಾತೆ ನಿರ್ವಾಹಕರು ಖಾತೆಯಲ್ಲಿ ಕನಿಷ್ಠ ಸರಾಸರಿ ಮಾಸಿಕ/ತ್ರೈಮಾಸಿಕ ಶಿಲ್ಕು ಹಣವನ್ನು ಕಾಪಾಡಿಕೊಳ್ಳಬೇಕು. ಇದನ್ನು ಪಾಲಿಸದಿದ್ದಲ್ಲಿ ಸೇವಾ ಶುಲ್ಕಗಳನ್ನು ವಿಧಿಸಲಾಗುತ್ತದೆ.

  **ಸರಾಸರಿ ತ್ರೈಮಾಸಿಕ ಶಿಲ್ಕನ್ನು (ಎಕ್ಯೂಬಿ)** ಹೀಗೆ ಲೆಕ್ಕಾಚಾರ ಮಾಡಲಾಗುತ್ತದೆ – ಆರ್ಥಿಕ ತ್ರೈಮಾಸಿಕ ಅವಧಿಗೆ (ಏಪ್ರಿಲ್-ಜೂನ್, ಜುಲೈ-ಸೆಪ್ಟೆಂಬರ್, ಅಕ್ಟೋಬರ್-ಡಿಸೆಂಬರ್, ಜನವರಿ-ಮಾರ್ಚ್) ಖಾತೆಯಲ್ಲಿನ ದಿನದ ಅಂತ್ಯದ (ಇಒಡಿ) ಸರಾಸರಿ ಶಿಲ್ಕುಗಳು. ಉದಾಹರಣೆಗೆ- (ಇಒಡಿ ಶಿಲ್ಕು ದಿನ 1+ ಇಒಡಿ ಶಿಲ್ಕು ದಿನ 2...)/ಹಣಕಾಸು ತ್ರೈಮಾಸಿಕದಲ್ಲಿನ ದಿನಗಳ ಸಂಖ್ಯೆ

**ಸರಾಸರಿ ಮಾಸಿಕ ಶಿಲ್ಕನ್ನು (ಎಎಂಬಿ)** ಈ ರೀತಿಯಲ್ಲಿ ಲೆಕ್ಕಹಾಕಲಾಗುತ್ತದೆ – ಒಂದು ತಿಂಗಳ ಅವಧಿಯಲ್ಲಿ ಆ ಖಾತೆಯಲ್ಲಿ ಪ್ರತಿ ದಿನದ ಕೊನೆಯಲ್ಲಿ (ಇಓಡಿ) ಉಳಿಸಲಾದ ಶಿಲ್ಕುಗಳ ಸರಾಸರಿ. ಉದಾ: (ಇಓಡಿ ಶಿಲ್ಕು ದಿನ 1 + ಇಓಡಿ ಶಿಲ್ಕು ದಿನ 2...)/ಆ ತಿಂಗಳಿನಲ್ಲಿನ ದಿನಗಳ ಸಂಖ್ಯೆ

**ಚಾಲ್ತಿ ಖಾತೆಗಳು**

- ಚಾಲ್ತಿ ಖಾತೆ ಎಂದರೆ, ಖಾತೆಯಲ್ಲಿನ ಶಿಲ್ಕಿಗೆ ಅನುಗುಣವಾಗಿ ಅಥವಾ ಒಪ್ಪಿಕೊಳ್ಳಲಾದ ನಿರ್ದಿಷ್ಟ ಮೊತ್ತದ ವರೆಗೆ ಎಷ್ಟು ಬಾರಿ ಬೇಕಾದರೂ ಹಣ ಹಿಂತೆಗೆದುಕೊಳ್ಳಲು ಅನುಮತಿಸಲಾಗುವ ಒಂದು ಪ್ರಕಾರದ ಬೇಡಿಕೆ ಠೇವಣಿಯಾಗಿರುತ್ತದೆ.
- ಚಾಲ್ತಿ ಖಾತೆಯನ್ನು ವೈಯಕ್ತಿಕ ಜನರು, ಮಾಲೀಕತ್ವದ ವ್ಯವಹಾರ ಸಂಸ್ಥೆಗಳು, ಪಾಲುದಾರಿಕೆ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ಲಿಮಿಟೆಡ್ ಕಂಪನಿಗಳು, ಹೆಚ್.ಯು.ಎಫ್ ಗಳು, ಸೊಸೈಟಿಗಳು, ಟ್ರಸ್ಟ್ ಗಳು ಹಾಗೂ ಇತರರು ತೆರೆಯಬಹುದು.
- ಚಾಲ್ತಿ ಖಾತೆಯಲ್ಲಿರುವ ಜಮಾ ಉಳಿಕೆಗಳಿಗೆ ಯಾವುದೇ ಬಡ್ಡಿಯನ್ನು ಪಾವತಿಸಲಾಗುವುದಿಲ್ಲ
- ಖಾತೆಯ ಮೂಲಕ ನಿರಂತದ 2 ವರ್ಷ ಕಾಲಾಧಿಯವರೆಗೆ ಗ್ರಾಹಕರ ಮುಖಾಂತರ ವಹಿವಾಟು ಮಾಡಲಾಗದ ಖಾತೆಯನ್ನು ನಿಷ್ಕ್ರಿಯ ಖಾತೆಗಳು ಎಂದು ಪರಿಗಣಿಸಲಾಗುತ್ತದೆ.
- ಸಮಯದಿಂದ ಸಮಯಕ್ಕೆ ಬ್ಯಾಂಕಿನ ನಿಗದಿತ ದರಗಳ ಪಟ್ಟಿಯಲ್ಲಿ ನಿರ್ದಿಷ್ಟ ಪಡಿಸಲಾದಂತೆ ಖಾತೆ ನಿರ್ವಾಹಕರು ಖಾತೆಯಲ್ಲಿ **ಕನಿಷ್ಠ ಸರಾಸರಿ ತ್ರೈಮಾಸಿಕ ಶಿಲ್ಕು** ಹಣವನ್ನು ಕಾಪಾಡಿಕೊಳ್ಳಬೇಕು. ಇದನ್ನು ಪಾಲಿಸದಿದ್ದಲ್ಲಿ ಸೇವಾ ಶುಲ್ಕಗಳನ್ನು ವಿಧಿಸಲಾಗುತ್ತದೆ. ಸರಾಸರಿ ತ್ರೈಮಾಸಿಕ ಶಿಲ್ಕನ್ನು (ಎಕ್ಯೂಬಿ) ಹೀಗೆ ಲೆಕ್ಕಾಚಾರ ಮಾಡಲಾಗುತ್ತದೆ – ಆರ್ಥಿಕ ತ್ರೈಮಾಸಿಕ ಅವಧಿಗೆ (ಏಪ್ರಿಲ್-ಜೂನ್, ಜುಲೈ-ಸೆಪ್ಟೆಂಬರ್, ಅಕ್ಟೋಬರ್-ಡಿಸೆಂಬರ್, ಜನವರಿ-ಮಾರ್ಚ್) ಖಾತೆಯಲ್ಲಿನ ದಿನದ ಅಂತ್ಯದ (ಇಓಡಿ) ಸರಾಸರಿ ಶಿಲ್ಕುಗಳು. ಉದಾಹರಣೆಗೆ – (ಇಓಡಿ ಉಳಿಕೆ ಹಣ ದಿನ1+ಇಓಡಿ ಉಳಿಕೆ ಹಣ ದಿನ2...) / ಆರ್ಥಿಕ ತ್ರೈಮಾಸಿಕದಲ್ಲಿನ ದಿನಗಳ ಸಂಖ್ಯೆ

**ಜಾಗತಿಕ ಭಾರತೀಯ ಬ್ಯಾಂಕಿಂಗ್**

- ಅನಿವಾಸಿ ಉಳಿತಾಯ ಬ್ಯಾಂಕ್ ಖಾತೆಗಳನ್ನು ಎನ್.ಆರ್.ಐ ಗಳು, ಪಿಐಓಗಳು ಮತ್ತು ಭಾರತದ ಹೊರಗೆ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹಣವನ್ನು ಉಳಿತಾಯ ಮಾಡುವ ಹವ್ಯಾಸವನ್ನು ಮೂಡಿಸಲು ಮತ್ತು ಅವರ ಭವಿಷ್ಯದಲ್ಲಿ ಹಣದ ಅಗತ್ಯತೆಯನ್ನು ಪೂರೈಸಲು ಸಹಾಯ ಮಾಡುವಂತೆ ವಿನ್ಯಾಸಗೊಳಿಸಲಾಗಿದೆ
- ಭಾರತೀಯ ರೂಪಾಯಿಗಳಲ್ಲಿ ನಿರ್ವಹಣೆ ಮಾಡಿದ ನಾನ್ ರೆಸಿಡೆಂಟ್ ಎಕ್ಸಟರ್ನಲ್ (ಎನ್.ಆರ್.ಇ) ಮತ್ತು ನಾನ್ – ರೆಸಿಡೆಂಟ್ ಆರ್ಡಿನರಿ (ಎನ್.ಆರ್.ಐ) ಖಾತೆಗಳನ್ನು ನಿರ್ದಿಷ್ಟ ಅಗತ್ಯತೆಗಳಿಗೆ ತೆರೆಯಬಹುದು. ಈ ಖಾತೆಗಳಿಂದ ಹಣವನ್ನು ವಿದೇಶೀ ಆಂತರಿಕ ಹಣ ರವಾನೆಗಳು / ಚೆಕ್ ಗಳು/ ಡೆಬಿಟ್ / ಎಟಿಎಮ್ ಕಾರ್ಡ್ / ಇಂಟರ್ನೆಟ್ ಬ್ಯಾಂಕಿಂಗ್ ವಿಧಾನದ ಮೂಲಕ ಪಾವತಿ ಮಾಡಬಹುದು ಅಥವಾ ಹಿಂಪಡೆಯಬಹುದು
- ನಾನ್ ರೆಸಿಡೆಂಟ್ ಎಕ್ಸಟರ್ನಲ್ (ಎನ್.ಆರ್.ಐ) ಪಾವತಿ ಖಾತೆಗಳನ್ನು ವಿದೇಶೀ ಬ್ಯಾಂಕ್ ಮೂಲಕ ಭಾರತಕ್ಕೆ ಫಂಡ್ ಗಳ ರವಾನೆಯ ಮೂಲಕ ತೆರೆಯಬಹುದು. ಇದು ವಾಪಸಾತಿ ಖಾತೆಯಾಗಿದೆ ಮತ್ತು ಇನ್ನೊಂದು ಎನ್.ಆರ್.ಐ ಖಾತೆ ಅಥವಾ ಎಫ್.ಸಿ.ಎನ್.ಆರ್ (ಬಿ) ಖಾತೆಯಿಂದ ವರ್ಗಾವಣೆಯನ್ನು ಅನುಮತಿಸಲಾಗಿದೆ. ಎನ್.ಆರ್.ಇ ಖಾತೆಗಳಿಂದ ಸ್ಥಳೀಯ ಪಾವತಿಗಳನ್ನು ಮುಕ್ತವಾಗಿ ಮಾಡಬಹುದು
- ನಾನ್ ರೆಸಿಡೆಂಟ್ ಆರ್ಡಿನರಿ (ಎನ್.ಆರ್.ಓ) ಪಾವತಿ ಖಾತೆಗಳನ್ನು ಸ್ಥಳೀಯ ನಂಬಿಕೆಗೆ ಅರ್ಹ ವಹಿವಾಟುಗಳಿಂದ ಹಣವನ್ನು ಸಂಗ್ರಹಿಸಲು ತೆರೆಯಬಹುದು. ಎನ್.ಆರ್.ಓ ಪಾವತಿ ಖಾತೆಗಳ ಮೂಲಧನವು ಹಿಂತಿರುಗಿಸಲಾಗದೇ ಇದ್ದು, ಆರ್.ಬಿ.ಐ ಮಾರ್ಗದರ್ಶಿಯ ಪ್ರಕಾರ ಭಾರತದಲ್ಲಿ ಹೊಂದಿರುವ ಎನ್.ಆರ್.ಓ ಉಳಿಕೆಗಳು/ಮಾರಾಟ ಕ್ರಮಗಳಿಂದ ಪ್ರಸ್ತುತ ಆದಾಯ ಮತ್ತು ಪ್ರತಿ ಕ್ಯಾಲೆಂಡರ್ ವರ್ಷಕ್ಕೆ 1, ಮಿಲಿಯನ್ ಯು.ಎಸ್.ಡಿ ಡಾಲರ್ ವರೆಗೆ ಬಡ್ಡಿ ಗಳಿಕೆಯು ಹಿಂತಿರುಗಿಸುವಂತಹುದ್ದಾಗಿದೆ
- ಎನ್ಆರ್ಇ / ಎನ್ಆರ್ಓ ಠೇವಣಿಗಳ ಬಡ್ಡಿ ದರಗಳನ್ನು ಶಾಖೆಗಳಲ್ಲಿ ಮತ್ತು ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಪ್ರದರ್ಶಿಸತಕ್ಕದ್ದು
- 1ನೇ ಸಪ್ಟಂಬರ್ 2017 ರಿಂದ ಕೆಳಗಿನ ಬಡ್ಡಿ ದರಗಳು ದೈನಂದಿನ ಮುಕ್ತಾಯ ಶಿಲ್ಕುಗಳ ಮೇಲೆ ಅನ್ವಯವಾಗುತ್ತವೆ ಮತ್ತು ತ್ರೈಮಾಸಿಕ ಆಧಾರದ ಮೇಲೆ ಪಾವತಿಸಲಾಗುತ್ತದೆ, ಆದರೆ ಅದು ಕನಿಷ್ಟ ರೂ ಆಗಿರಬೇಕು 1/-.

| **ಉಳಿತಾಯಗಳ ಶಿಲ್ಕುಗಳು** | **ಬಡ್ಡಿಯ ದರಗಳು ಅನ್ವಯಿಸುವ ದಿನಾಂಕ 1ನೇ ಸೆಪ್ಟಂಬರ್'17** |
|---|---|
| ರೂ.1 ಲಕ್ಷಕ್ಕಿಂತ ಕಡಿಮೆ | 5% ಪ್ರ.ವ. |
| 1 ಲಕ್ಷದಿಂದ 1 ಕೋಟಿಯ ಒಳಗೆ | 6% ಪ್ರ.ವ. |
| 1 ಕೋಟಿ ಮತ್ತು ಹೆಚ್ಚಿಗೆ | 6.25% ಪ್ರ.ವ. |

ರೂ. 100 ಕೋಟಿಗೂ ಮೀರಿದ ಮೊಬಲಗುಗಲಿಗಾಗಿ, ದಯವಿಟ್ಟು ಬ್ರಾಂಚನ್ನು ಅಥವಾ ನಿಮ್ಮ ಸೂಚಿತ ರಿಲೇಶನ್‌ಶಿಪ್ ಮೆನೇಜರ್‌ರನ್ನು ಸಂಪರ್ಕಿಸಿರಿ. ದರಗಳು ಯೆಸ್ ಬ್ಯಾಂಕ್‌ನ ಏಕೈಕ ನಿಷ್ಕರ್ಷೆಯ ಮೇರೆಗೆ ಬದಲಾಗುವುದು ಸಾಧ್ಯವಿದೆ. ಷರತ್ತುಗಳು ಅನ್ವಯಿಸುತ್ತವೆ.

- ಯಾವುದೇ ಗ್ರಾಹಕ ತನ್ನ ಖಾತೆಯ ಮೂಲಕ ನಿರಂತರವಾಗಿ 2 ವರ್ಷಗಳ ವರೆಗೆ ಯಾವುದೇ ವ್ಯವಹಾರ ಮಾಡದಿದ್ದಲ್ಲಿ ಆ ಖಾತೆಯನ್ನು ನಿಷ್ಕ್ರಿಯ ಖಾತೆಯೆಂದು ಪರಿಗಣಿಸಲಾಗುತ್ತದೆ
  ಸಮಯದಿಂದ ಸಮಯಕ್ಕೆ ಬ್ಯಾಂಕಿನ ನಿಗದಿತ ದರಗಳ ಪಟ್ಟಿಯಲ್ಲಿ ನಿರ್ದಿಷ್ಟ ಪಡಿಸಲಾದಂತೆ ಖಾತೆ ನಿರ್ವಾಹಕರು ಖಾತೆಯಲ್ಲಿ ಕನಿಷ್ಠ ಸರಾಸರಿ ಮಾಸಿಕ/ತ್ರೈಮಾಸಿಕ ಶಿಲ್ಕು ಹಣವನ್ನು ಕಾಪಾಡಿಕೊಳ್ಳಬೇಕು. ಇದನ್ನು ಪಾಲಿಸದಿದ್ದಲ್ಲಿ ಸೇವಾ ಶುಲ್ಕಗಳನ್ನು ವಿಧಿಸಲಾಗುತ್ತದೆ
  **1. ಸರಾಸರಿ ತ್ರೈಮಾಸಿಕ ಶಿಲ್ಕನ್ನು (ಎಕ್ಯೂಬಿ)** ಹೀಗೆ ಲೆಕ್ಕಾಚಾರ ಮಾಡಲಾಗುತ್ತದೆ – ಆರ್ಥಿಕ ತ್ರೈಮಾಸಿಕ ಅವಧಿಗೆ (ಏಪ್ರಿಲ್-ಜೂನ್, ಜುಲೈ-ಸೆಪ್ಟೆಂಬರ್, ಅಕ್ಟೋಬರ್-ಡಿಸೆಂಬರ್, ಜನವರಿ-ಮಾರ್ಚ್) ಖಾತೆಯಲ್ಲಿನ ದಿನದ ಅಂತ್ಯದ (ಇಓಡಿ) ಸರಾಸರಿ ಶಿಲ್ಕುಗಳು. ಉದಾಹರಣೆಗೆ- (ಇಓಡಿ ಶಿಲ್ಕು ದಿನ 1+ ಇಓಡಿ ಶಿಲ್ಕು ದಿನ 2...)/ಹಣಕಾಸು ತ್ರೈಮಾಸಿಕದಲ್ಲಿನ ದಿನಗಳ ಸಂಖ್ಯೆ
  **2. ಸರಾಸರಿ ಮಾಸಿಕ ಶಿಲ್ಕನ್ನು (ಎಎಂಬಿ)** ಈ ರೀತಿಯಲ್ಲಿ ಲೆಕ್ಕಹಾಕಲಾಗುತ್ತದೆ – ಒಂದು ತಿಂಗಳ ಅವಧಿಯಲ್ಲಿ ಆ ಖಾತೆಯಲ್ಲಿ ಪ್ರತಿ ದಿನದ ಕೊನೆಯಲ್ಲಿ (ಇಓಡಿ) ಉಳಿಸಲಾದ ಶಿಲ್ಕುಗಳ ಸರಾಸರಿ. ಉದಾ: (ಇಓಡಿ ಶಿಲ್ಕು ದಿನ 1 + ಇಓಡಿ ಶಿಲ್ಕು ದಿನ 2...)/ಆ ತಿಂಗಳಿನಲ್ಲಿನ ದಿನಗಳ ಸಂಖ್ಯೆ

ಮುದ್ಧತಿ ಠೇವಣಿ ಖಾತೆಗಳು

- ಹೆಚ್ಚು ವಿವರಗಳನ್ನು ಪಡೆಯಲು ಮತ್ತು ನಿಮ್ಮ ಅಗತ್ಯತೆಗೆ ಅನುಸಾರವಾಗಿ ವಿವಿಧ ಠೇವಣಿ ಯೋಜನೆಗಳಲ್ಲಿ ಹಣವನ್ನು ಹೂಡಿಕೆ ಮಾಡಲು ನಿಮಗೆ ಸಹಾಯವನ್ನು ನೀಡಲು ನಮ್ಮ ಬ್ಯಾಂಕ್ ಸಿಬ್ಬಂದಿ ಸಂತೋಷಪಡುತ್ತಾರೆ
- ಮುದ್ಧತಿ ಠೇವಣಿ ಖಾತೆಗಳನ್ನು ವೈಯಕ್ತಿಕ ಜನರು, ಪಾಲುದಾರಿಕೆ ಸಂಸ್ಥೆಗಳು, ಮಾಲೀಕತ್ವದ ವ್ಯವಹಾರ ಸಂಸ್ಥೆಗಳು, ಖಾಸಗಿ ಮತ್ತು ಸರ್ಕಾರಿ ನಿಯಮಿತ ಕಂಪನಿಗಳು, ಹೆಚ್.ಯು.ಎಫ್ ಗಳು / ನಿರ್ದಿಷ್ಟ ಪಡಿಸಿದ ಅಸೋಸಿಯೇಟ್ ಗಳು ಹಾಗೂ ಇನ್ನಿತರರು ತೆರೆಯಬಹುದು
- ಕೆಲವು ಮುದ್ಧಿತಿ ಠೇವಣಿ ಯೋಜನೆಗಳು ಹಿರಿಯ ನಾಗರಿಕರಿಗೆ ಹೆಚ್ಚು ಬಡ್ಡಿದರವನ್ನು ನೀಡಬಹುದು
- ನಿರ್ದಿಷ್ಟ ಪಡಿಸಿದ ಹೊರತು, ಅಕಾಲಿಕ ಹಿಂಪಡೆಯುವಿಕೆಯನ್ನು, ಠೇವಣಿಯ ಕಾಲಾವಧಿ ಅಥವಾ ಒಪ್ಪಂದದ ದರ ಯಾವುದು ಕಡಿಮೆಯೋ ಆ ಬಡ್ಡಿದರದಲ್ಲಿ ಅನುಮತಿಸಲಾಗುತ್ತದೆ. ಆದರೆ, ಬ್ಯಾಂಕಿನೊಂದಿಗೆ 7 ದಿನಕ್ಕಿಂತ ಕಡಿಮೆ ಇದ್ದ ಠೇವಣಿಯ ಅಕಾಲಿಕ ಹಿಂಪಡೆಯುವಿಕೆಗೆ ಯಾವುದೇ ಬಡ್ಡಿದರ ಪಾವತಿಸಲಾಗುವುದಿಲ್ಲ
- ವಿನಂತಿಯ ಮೇರೆಗೆ ಅವಧಿ ಠೇವಣಿಗಳನ್ನು ಡ್ಯೂ ದಿನಾಂಕದಂದು ಬ್ಯಾಂಕ್ ನವೀಕರಿಸುತ್ತದೆ ಮತ್ತು ಬ್ಯಾಂಕು ಕಾಲಕಾಲಕ್ಕೆ ನಿರ್ಧರಿಸಲಾದ ಚಾಲ್ತಿ ದರಗಳಿಗೆ ಅನುಗುಣವಾಗಿ ಬಡ್ಡಿಯನ್ನು ಪಾವತಿಸುತ್ತದೆ. ನಿರ್ದಿಷ್ಟ ಸೂಚನೆ ಇಲ್ಲದ ಪ್ರಸಂಗಗಳಲ್ಲಿ 1 ಕೋಟಿಗೆ ಕಡಿಮೆ ಇರುವ ಠೇವಣಿಗಳನ್ನು ಸ್ವಯಂಚಾಲಿತವಾಗಿ ಅದೇ ಕಾಲಾವಧಿಗೆ ಅಥವಾ ಮೆಚುರಿಟಿ ಸಮಯದಲ್ಲಿ ಚಾಲನೆಯಲ್ಲಿರುವ ಬಡ್ಡಿ ದರಗಳ ಪ್ರಕಾರ ನವೀಕರಿಸಲ್ಪಡುತ್ತದೆ
- ನಮೂದಿಸಲಾಗುವ ಬಡ್ಡಿ ದರಗಳು ವಾರ್ಷಿಕವಾಗಿರುತ್ತದೆ ಮತ್ತು ನೈಜವಾಗಿ ವರ್ಷದಲ್ಲಿನ ದಿನಗಳ ಸಂಖ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ (ಅಂದರೆ ಅಧಿಕ ವರ್ಷದಲ್ಲಿ 366 ದಿನಗಳು)
- ಹೂಡಿಕೆಗಳ ಮೇಲಿನ ಬಡ್ಡಿಯನ್ನು ತ್ರೈಮಾಸಿಕವಾಗಿ ಅಥವಾ ಸಂಯುಕ್ತಗೊಳಿಸಿದ ತ್ರೈಮಾಸಿಕ (ಅಂದರೆ ಬಡ್ಡಿಯ ಮರು – ಹೂಡಿಕೆ) ಅಥವಾ ರಿಯಾಯತಿ ಮೌಲ್ಯದಲ್ಲಿ ಮಾಸಿಕ ಅಥವಾ ವಾಯಿದೆ ದಿನಾಂಕಂದು ಹೀಗೇ ಹೂಡಿಕೆದಾರರ ಆಯ್ಕೆಯ ಅನುಸಾರ ಪಾವತಿಸಲಾಗುವುದು
- ಬಡ್ಡಿ ದರವನ್ನು ಸಮಯದಿಂದ ಸಮಯಕ್ಕೆ ಪರಿಷ್ಕರಿಸಲಾಗುತ್ತದೆ ಮತ್ತು ಅದನ್ನು ಶಾಖೆಗಳಲ್ಲಿ ಮತ್ತು ಬ್ಯಾಂಕಿನ" ವೆಬ್-ಸೈಟ್ ನಲ್ಲಿ ಸಾರ್ವಜನಿಕರ ತಿಳುವಳಿಕೆಗಾಗಿ ಪ್ರದರ್ಶಿಸಲಾಗುತ್ತದೆ
- ಪರಿಷ್ಕೃತ ಬಡ್ಡಿ ದರಗಳು ಕೇವಲ ನವೀಕರಣಕ್ಕೆ ಮತ್ತು ಹೊಸ ಹೂಡಿಕೆಗಳಿಗೆ ಅನ್ವಯವಾಗುತ್ತದೆ ಮತ್ತು ಅಸ್ತಿತ್ವದಲ್ಲಿರುವ ಹೂಡಿಕೆಗಳು ಒಪ್ಪಂದದ ದರದಲ್ಲೇ ಮುಂದುವರಿಯುತ್ತದೆ
- ಪ್ರತಿ ಹೂಡಿಕೆದಾರರಿಗೆ, ಪ್ರತಿ ಆರ್ಥಿಕ ವರ್ಷಕ್ಕೆ ಹೂಡಿಕೆಗಳ ಮೇಲಿನ ಬಡ್ಡಿಯು ಆದಾಯ ತೆರಿಗೆ ಇಲಾಖೆಯು ನಿರ್ದಿಷ್ಟಪಡಿಸಿದ ದರದಲ್ಲಿ ಮೂಲದಲ್ಲಿನ ತೆರಿಗೆ ಕಡಿತಕ್ಕೆ (ಟಿಡಿಎಸ್) ಒಳಪಟ್ಟಿರುತ್ತದೆ
- ತೆರಿಗೆ ಕಡಿತವಿಲ್ಲದೇ ಹೂಡಿಕೆಗಳ ಮೇಲಿನ ಬಡ್ಡಿಯನ್ನು ಸ್ವೀಕರಿಸಲು ಹೂಡಿಕೆದಾರರು ಆದ್ಯತೆಯಾಗಿ ಆರ್ಥಿಕ ವರ್ಷದ ಪ್ರಾರಂಭದಲ್ಲೇ ಫಾರ್ಮ್ ಸಂಖ್ಯೆ 15 ಹೆಚ್ ರಲ್ಲಿ ಪ್ರಮಾಣಪತ್ರವನ್ನು ಒದಗಿಸತಕ್ಕದ್ದು
- ಕಡಿತಗೊಳಿಸಿದ ತೆರಿಗೆಗೆ ಬ್ಯಾಂಕು ಟಿಡಿಎಸ್ ಅನ್ನು ನೀಡುತ್ತದೆ
- ಸ್ವೀಪ್-ಇನ್ ಎನ್ನುವುದು ಮುದ್ದತಿ ಠೇವಣಿ ಖಾತೆಯೊಂದಿಗೆ ಉಳಿತಾಯ/ಚಾಲ್ತಿ ಖಾತೆಯನ್ನು ಸಂಪರ್ಕಿಸುವ ಸೌಲಭ್ಯವಾಗಿರುತ್ತದೆ. ಸಾಕಷ್ಟು ಶಿಲ್ಕು ಇಲ್ಲದ ಸಂದರ್ಭದಲ್ಲಿ ಸಂಪರ್ಕಿತ ಮುದ್ದತಿ ಠೇವಣಿಯನ್ನು ಅಕಾಲಿಕವಾಗಿ "ಲಾಸ್ಟ್ ಇನ್-ಫಸ್ಟ್ ಔಟ್" (ಡ್ವೀಪ್-ಇನ್ ಹೊಂದಿಸುವುದು) ಆಧಾರದಲ್ಲಿ ಒಡೆಯಲಾಗುತ್ತದೆ ಮತ್ತು ಅಗತ್ಯ ಹಣವನ್ನು ಉಳಿತಾಯ/ಚಾಲ್ತಿ ಖಾತೆಗೆ ವರ್ಗಾಯಿಸಲಾಗುತ್ತದೆ.
- ಕೆಲವು ಮಿತಿಯ ವರೆಗೆ ಮುದ್ದತಿ ಠೇವಣಿಗೆ ಪ್ರತಿಯಾಗಿ ಸಾಲವನ್ನು ಅನುಮತಿಸಲಾಗುತ್ತದೆ ಮತ್ತು ನಿರ್ಧಿಷ್ಟಪಡಿಸಿದ ಬಡ್ಡಿ ದರದೊಂದಿಗೆ ಅದನ್ನು ಮಂಜೂರುಮಾಡಬಹುದು.
- ಜಂಟಿ ಹೆಸರುಗಳಲ್ಲಿ ಹೊಂದಿದ ಮುದ್ದತಿ ಠೇವಣಿಗಳು -
  - ಮುದ್ದತಿ ಠೇವಣಿಯ ಅಕಾಲಿಕ ಮರುಪಾವತಿಯನ್ನು ಎಲ್ಲಾ ಜಂಟಿ ಹೂಡಿಕೆದಾರರು ಕೋರಿಕೆಗೆ ಸಹಿ ಮಾಡಿದ ನಂತರವೇ ಅನುಮತಿಸಲಾಗುತ್ತದೆ. ಮೇಲಿನದಕ್ಕೆ ಮಾತ್ರ ಸೀಮಿತವಾಗಿರದೆ ಗ್ರಾಹಕ ಒಪ್ಪಿಕೊಳ್ಳುವುದೇನೆಂದರೆ, "ಅವರು ಅಥವಾ ಬದುಕಿರುವವ" ಅಥವಾ "ಹಿಂದಿನ ಅಥವಾ ಬದುಕಿರುವವ" ಅಧ್ಯಾದೇಶದಲ್ಲಿ ಇರಿಸಲಾದ ಅವಧಿ/ನಿಶ್ಚಿತ ಠೇವಣಿಗೆ

ಸಂಬಂಧಿಸಿದಂತೆ ಬ್ಯಾಂಕು ಅವಧಿ-ಪೂರ್ವ ಹಿಂಪಡೆಯುವಿಕೆಯನ್ನು ಬದುಕಿರುವವ ಜಂಟಿ ಠೇವಣಿದಾರನಿಗೆ ಇನ್ನೊಬ್ಬರ ಸಾವಿನ ಸಂದರ್ಭದಲ್ಲಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಜಂಟಿ ಠೇವಣಿದಾರನಿಂದ ಜಂಟಿ ಅಧ್ಯಾದೇಶ ಹೊಂದಿದ್ದಲ್ಲಿ ಅನುಮತಿಸುತ್ತದೆ.
    - ಮುದ್ದತಿ ಠೇವಣಿಗೆ ಪ್ರತಿಯಾಗಿ ಸಾಲವನ್ನು ಬಯಸಿದರೆ, ಸಾಲದ ಅರ್ಜಿಯಲ್ಲಿ ಎಲ್ಲಾ ಜಂಟಿ ಹೂಡಿಕೆದಾರರು ಸಹಿ ಮಾಡಬೇಕಾಗುತ್ತದೆ
- ಗ್ರಾಹಕ ಅವಧಿಗೆ ಮುಂಚಿತವಾಗಿ ಠೇವಣಿಯನ್ನು ಹಿಂತೆಗೆಯಲು ಬಯಸಿದಲ್ಲಿ, ಠೇವಣಿ ಮಾಡಿದ ದಿನಾಂಕದಂದು ಚಾಲನೆಯಲ್ಲಿರುವ ಬಡ್ಡಿ ದರದ ಪ್ರಕಾರ, ಬ್ಯಾಂಕಿನಲ್ಲಿ ಠೇವಣಿಮಾಡಿದ ಅವಧಿಗೆ ಬಡ್ಡಿಯನ್ನು ನೀಡಲಾಗುತ್ತದೆ. ಸ್ಥಳೀಯ ಮತ್ತು ಎನ್.ಆರ್.ಐ. ಠೇವಣಿಗಳಿಗೆ ಠೇವಣಿಮಾಡಿದ 7 ದಿನಗಳ ಒಳಗಾಗಿ ಹಣವನ್ನು ಶಾಶ್ವತವಾಗಿ ಹಿಂಪಡೆದಲ್ಲಿ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಎನ್.ಆರ್.ಇ/ಎಫ್.ಸಿ.ಎನ್.ಆರ್. ಠೇವಣಿಗಳಿಗೆ ಠೇವಣಿಮಾಡಿದ 1 ವರ್ಷ ಪೂರೈಸುವ ಮುಂಚಿತವಾಗಿ ಅವಧಿಪೂರ್ವ ಹಿಂತೆಗೆತ ಮಾಡಿದಲ್ಲಿ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ. ಎಫ್.ಸಿ.ಎನ್.ಆರ್. (ಬಿ) ಠೇವಣಿಗಳಿಗೆ ಸಂಬಂಧಿಸಿದಂತೆ ಪ್ರತಿ ವರ್ಷಕ್ಕೆ ಕೋಟ್ ಮಾಡಲಾದ ಬಡ್ಡಿ ದರಗಳನ್ನು ಲೀಪ್ ವರ್ಷವನ್ನು ಲೆಕ್ಕಿಸದೆ 360 ದಿನಗಳ ಆಧಾರದ ಮೇಲೆ ಪಾವತಿ ಮಾಡಲಾಗುತ್ತದೆ

**ನಿಮ್ಮ ಗ್ರಾಹಕರ ಮಾರ್ಗಸೂಚಿಗಳನ್ನು ತಿಳಿದುಕೊಳ್ಳಿ**

- ನಿಮ್ಮ ಗ್ರಾಹಕರನ್ನು ತಿಳಿಯಿರಿ (ಕೆವೈಸಿ) ನೀತಿಯನ್ನು ಬ್ಯಾಂಕ್ ಹೊಂದಿದ್ದು ಅದು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣಗಳಿಗೆ ಒಳಪಟ್ಟಿರುತ್ತದೆ.
- ಬ್ಯಾಂಕಿನ ಕೆವೈಸಿ ತತ್ತ್ವವು ಸಮಾಜ ಘಾತುಕ ವ್ಯಕ್ತಿಗಳಿಂದ ಅಕ್ರಮವಾಗಿ ಹಣ ವರ್ಗಾವಣೆ ಅಥವಾ ಭಯೋತ್ಪಾದನೆ ಚಟುವಟಿಕೆಗಳಿಗೆ ಉದ್ದೇಶಪೂರ್ವಕವಾಗಿ ಅಥವಾ ಉದ್ದೇಶಪೂರ್ವಕವಲ್ಲದೆ ಹಣವನ್ನು ಹೂಡುವುದನ್ನು ತಪ್ಪಿಸುವುದಾಗಿದೆ. ಬ್ಯಾಂಕು ತನ್ನ ಗ್ರಾಹಕರನ್ನು ಮತ್ತು ಅವ್ರ ಹಣಕಾಸು ವ್ಯವಹಾರಗಳನ್ನು ಉತ್ತಮವಾಗಿ ತಿಳಿಯಲು/ಅರ್ಥಮಾಡಿಕೊಳ್ಳಲು ಈ ನೀತಿಯ ಉದ್ದೇಶವು ಕ್ರಿಯಾತ್ಮಕಗೊಳಿಸುತ್ತದೆ. ತನ್ಮೂಲಕ ಇದು ತನ್ನ ಅಪಾಯಗಳನ್ನು ಎಚ್ಚರಿಕೆಯಿಂದ ನಿರ್ವಹಿಸಲು ಬ್ಯಂಕಿಗೆ ಸಹಾಯಮಾಡುತ್ತದೆ.
- ಸಂಬಂಧಗಳನ್ನು ಸ್ಥಾಪಿಸುವ, ಖಾತೆಗಳನ್ನು ತೆರೆಯುವ ಅಥವಾ ಬ್ಯಾಂಕಿನೊಂದಿಗೆ ಪ್ರಮುಖವಾದ ವ್ಯವಹಾರ ವಹಿವಾಟವನ್ನು ನಡೆಸುವ ಗ್ರಾಹಕರ ನೈಜ ಗುರುತನ್ನು ನಿರ್ಧರಿಸಲು ಮತ್ತು ದಾಖಲಮಾಡಲು ಸೂಕ್ತವಾಆದ ಕೆವೈಸಿ ಕಾರ್ಯ ವಿಧಾನ ಮತ್ತು ಆಂತರಿಕ ನಿಯಂತ್ರಣಾ ಕ್ರಮಗಳನ್ನು ಬ್ಯಾಂಕು ಕೈಕೊಳ್ಳುತ್ತದೆ.
- ಖಾತೆಯನ್ನು ತೆರೆಯುವ ಸಂದರ್ಭದಲ್ಲಿ, ಕಾನೂನು ರೀತ್ಯಾ ಗುರುತನ್ನು ಸ್ಥಾಪಿಸಲು ಉದ್ದೇಶಿತ ಗ್ರಾಹಕರ ವಿಳಾಸ ಮತ್ತು ಸಹಿಯನ್ನು ಪರಿಶೀಲಿಸಲು ದಾಖಲೆಗಳನ್ನು ಬ್ಯಾಂಕ್ ಪಡೆದುಕೊಳ್ಳುತ್ತದೆ
- ಗ್ರಾಹಕರಿಂದ ಪಡೆದುಕೊಳ್ಳುವ ಸೂಚಿತ ದಾಖಲೆಗಳೆಂದರೆ
    - ಗ್ರಾಹಕರ ಕಾನೂನುರೀತ್ಯ ಗುರುತು ಮತ್ತು ಇರುವಿಕೆಯನ್ನು ಸ್ಥಾಪಿಸಲು- ಪಾಸ್ಪೋರ್ಟ್/ಆಧಾರ್ ಕಾರ್ಡ್/ಪ್ಯಾನ್ ಕಾರ್ಡ್/ಮತದಾರ ಗುರುತು ಪತ್ರ/ಚಾಲನಾ ಪರವಾನಗಿ ಇತರೆ
    - ವಿಳಾಸ ಪುರಾವೆಯನ್ನು ಪರಿಶೀಲಿಸಲು- ಟೆಲಿಫೋನ್ ಬಿಲ್/ಬ್ಯಾಂಕ್ ಖಾತೆ ಸ್ಟೇಟ್ಮೆಂಟ್/ರೇಶನ್ ಕಾರ್ಡ್/ವಿದ್ಯುಚ್ಛಕ್ತಿ ಬಿಲ್/ ಪಾಸ್‌ಪೋರ್ಟ್ ಇತ್ಯಾದಿ
    - ಸಹಿಯ ಪುರಾವೆಯಾಗಿ-ಮಾನ್ಯ ಪಾಸ್‌ಪೋರ್ಟ್/ಪ್ಯನ್ ಕಾರ್ಡ್/ಮಾನ್ಯ ಚಾಲನಾ ಪರವಾನಗಿ ಇತ್ಯಾದಿ.

  ಒಬ್ಬ ವ್ಯಕ್ತಿಯಾಗಿದ್ದಲ್ಲಿ, ಮೇಲೆ ನಮೂದಿಸಲಾದ ದಾಖಲೆಗಳೊಂದಿಗೆ ಭಾವಚಿತ್ರವೊಂದನ್ನು ಸಹಿತ ಪಡೆದುಕೊಳ್ಳಲಾಗುತ್ತದೆ
- ಅಪಯವನ್ನು ಪರಿಣಾಮಕಾರಿ ನಿಯಂತ್ರಿಸಲು ಮತ್ತು ಕಡಿಮೆಗೊಳಿಸಲು ಸಾಮಾನ್ಯ ಚಟುವಟಿಕೆ ವಿಧಾನದಿಂದ ಹೊರತಾಗಿರುವ ವಹಿವಾಟುಗಳನ್ನು ಬ್ಯಾಂಕ್ ಗುರುತಿಸುತ್ತದೆ ಮತ್ತು ನಿರಂತರ ಪ್ರಕ್ರಿಯೆಯಾಗಿ ಗ್ರಾಹಕರ ವಹಿವಾಟುಗಳನ್ನು ಸಹಿತ ಬ್ಯಾಂಕು ಮೇಲ್ವಿಚಾರಣೆಮಾಡುತ್ತದೆ.

**ಹಣಕಾಸು ಒಳಪಡಿಕೆ**

- ಅತ್ಯುತ್ತಮ ಹಣಕಾಸು ಒಳಪಡಿಕೆಯನ್ನು ಕ್ರಿಯಾತ್ಮಕಗೊಳಿಸಲು ಚೆಕ್ ಬುಕ್. ಡೆಬಿಟ್/ಎಟಿಎಂ ಕಾರ್ಡ್, ಇಂಟರ್ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಮತ್ತು ಇಮೇಲ್/ಎಸ್ಎಮ್ಎಸ್ ಸೂಚನೆಗಳೊಂದಿಗೆ ಯಾವುದೇ ಕನಿಷ್ಟ ಶಿಲ್ಕಿನ ಅಗತ್ಯವಿಲ್ಲದೇ ನೋ-ಫ್ರಿಲ್ಸ್, ಉಳಿತಾಯ ಖಾತೆಯನ್ನು ಬ್ಯಾಂಕ್ ಒದಗಿಸುತ್ತದೆ
- ಯಾವುದೇ ವ್ಯಕ್ತಿಯ "ಅವನ/ಅವಳ ವಿಳಾಸ ರುಜುವಾತು ದಾಖಲೆಯನ್ನು ಒದಗಿಸಲು ಸಾಧ್ಯವಾಗದ ಕಾರಣ ಯಾವುದೇ ಗ್ರಾಹಕರಿಗೆ ಬ್ಯಾಂಕ್ ಸೇವೆಗಳನ್ನು ಬಳಕೆಮಾಡಲು ನಿರಾಕರಿಸಬಾರದು"ಎಂಬುದನ್ನು ಖಚಿತಪಡಿಸಿಕೊಳ್ಳುವುದೇ ಇದರ ಮೂಲ ಉದ್ದೇಶವಾಗಿರುತ್ತದೆ.
- ಖಾತೆ ಪ್ರಾರಂಭಿಸುವಿಕೆ ದಾಖಲಾತಿಯಲ್ಲಿ ಸಡಿಲಿಕೆಯೊಂದಿಗೆ ಸಹ ಖಾತೆಗಳನ್ನು ತೆರೆಯಬಹುದು ಮತ್ತು ಅಂತಹ ಖಾತೆಗಳಲ್ಲಿ ಕಾಪಾಡಿಕೊಳ್ಳುವ ಒಟ್ಟು ಸಂದಾಯ/ಉಳಿಕೆ ಹಣದಲ್ಲಿ ಗರಿಷ್ಠ ಮಿತಿ ಇರುತ್ತದೆ
- ಕೆವೈಸಿ ದಾಖಲಾತಿ ಮತ್ತು ದರಗಳ ನಿಗದಿತ ಪಟ್ಟಿಯಲ್ಲಿ ನಿರ್ಧಿಶ್ಟಪಡಿಸಿದ ಉಳಿತಾಯ ಖಾತೆಗಾಗಿನ ಕನಿಷ್ಠ ಸಾಮಾನ್ಯ ತ್ರೈಮಾಸಿಕ ಉಳಿಕೆ ಹಣದ ಅಗತ್ಯತೆಯನ್ನು ಬ್ಯಾಂಕ್ ಸಡಿಲುಗೊಳಿಸುವುದಲ್ಲದೇ, ಕಡಿಮೆ ಆದಾಯದ ಗ್ರಾಹಕರ ಮೇಲಿನ ಆರ್ಥಿಕ ಒತ್ತಡವನ್ನು ಹೋಗಲಾಡಿಸಲು ಗ್ರಾಹಕರ ಭಾವಚಿತ್ರ ತೆಗೆಯುವಿಕೆ ಮತ್ತು ಕೆವೈಸಿ ದಾಖಲಾತೆಗಳ ನಕಲು ಪ್ರತಿ/ಸ್ಕ್ಯಾನ್ ವೆಚ್ಚಗಳನ್ನು ಸಹಿತ ತಾನೇ ಭರಿಸುತ್ತದೆ

**ನಾಮನಿರ್ದೇಶನ ಸೌಲಭ್ಯ**

- ವೈಯಕ್ತಿಕ ನೆಲೆಯಲ್ಲಿ ತೆರೆದ ಖಾತೆಗಳಿಗೆ (ಅಂದರೆ ಏಕ/ಜಂಟಿ ಖಾತೆಗಳು ಜೊತೆಗೆ ಏಕ ಮಾಲಿಕತ್ವದ ವ್ಯಾಪಾರಿ ಸಂಸ್ಥೆಗಳ ಖಾತೆಗಳು) ಮಾತ್ರ ನಾಮ ನಿರ್ದೇಶನ ಸೌಲಭ್ಯವನ್ನು ಹೊಂದಿರುತ್ತವೆ. ಪ್ರತಿನಿಧಿತ್ವ ಹೊಂದಿದ ಖಾತೆಗಳಿಗೆ ಅಲ್ಲ
- ನಾಮನಿರ್ದೇಶನವನ್ನು ಓರ್ವ ವ್ಯಕ್ತಿಯ ಹೆಸರಿನಲ್ಲಿ ಮಾತ್ರ ಮಾಡಬಹುದು
- ಖಾತೆಯ ನಿರ್ವಾಹಕರು ಅವನ/ಅವಳ ಜೀವನಕಾಲದಲ್ಲಿ ಯಾವುದೇ ಸಮಯದಲ್ಲಿ ನಾಮನಿರ್ದೇಶನ ಮಾಡಬಹುದು, ರದ್ದುಗೊಳಿಸಬಹುದು ಅಥವಾ ಬದಲಾಯಿಸಬಹುದು. ನಾಮನಿರ್ದೇಶನ ಮಾಡುವ, ರದ್ದುಪಡಿಸುವ ಅಥವ ಬದಲಾಯಿಸುವ ಸಂದರ್ಭದಲ್ಲಿ ಸಾಕ್ಷ್ಯದ ಅಗತ್ಯವಿರುತ್ತದೆ ಮತ್ತು ವಿನಂತಿಯನ್ನು ಖಾತೆಯನ್ನು ನಿರ್ವಹಿಸುವ ಎಲ್ಲರೂ ಸಹಿ ಮಾಡಬೇಕು
- ನಾಮಿನಿ ಅಪ್ರಾಪ್ತನಾಗಿದ್ದರೆ, ನಾಮಿನಿಯ ಅಪ್ರಾಪ್ತ ವಯಸ್ಸಿನ ಸಮಯದಲ್ಲಿ ಖಾತೆದಾರರು ಸಾವನ್ನಪ್ಪಿದ ಸಂದರ್ಭದಲ್ಲಿ ಹಣವನ್ನು ಸ್ವೀಕರಿಸಲು ಹೂಡಿಕೆದಾರರು ಬೇರೆ ವ್ಯಕ್ತಿಯನ್ನು ಸಹ ನೇಮಕಮಾಡಬಹುದು
- ನಾಮನಿರ್ದೇಶನ ಮಾಡದೇ ಅಸ್ಥಿತ್ವದಲ್ಲಿರುವ ಖಾತೆಗಳಿಗೆ, ಖಾತೆದಾರರು ಶಾಖೆಯಲ್ಲಿ ಲಭ್ಯವಿರುವ ಅರ್ಜಿ ತುಂಬುವ ಮೂಲಕ ನಾಮನಿರ್ದೇಶನ ಸೌಲಭ್ಯವನ್ನು ಪಡೆದುಕೊಳ್ಳಬಹುದು

ಮರಣ ಹೊಂದಿದ ಖಾತೆದಾರರ ಖಾತೆಯಲ್ಲಿನ ಹಕ್ಕುಗಳನ್ನು ತ್ವರಿತವಾಗಿ ಪರಿಹರಿಸಲು ಮತ್ತು ಖಾತೆದಾರನ ಮರಣದ ಸಂದರ್ಭದಲ್ಲಿ ಕುಟುಂಬದ ಸದಸ್ಯರ ಕಷ್ಟವನ್ನು ಕಡಿಮೆಮಾಡುವ ಉದ್ದೇಶದಿಂದ ಮೇಲಿನ ನಿಬಂಧನೆಗಳನ್ನು ಮಾಡಲಾಗಿದೆ. ಈಗಾಗಲೇ ನಾಮನಿರ್ದೇಶನ ಸೌಲಭ್ಯವನ್ನು ಹೊಂದಿರದಿದ್ದರೆ ಅದನ್ನು ಪಡೆಯುವಂತೆ ಗ್ರಾಹಕರಿಗೆ (ಹೊಸ ಅಥವಾ ಅಸ್ತಿತ್ವದಲ್ಲಿರುವ) ಸಲಹೆ ನೀಡಲಾಗುತ್ತದೆ

**ಸ್ಥಾಯೀ ಸೂಚನೆಗಳು ಮತ್ತು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳು**

- ಒಂದು ಖಾತೆಯಿಂದ ಬ್ಯಾಂಕಿನೊಳಗೆ ಪೂರ್ವ-ನಿರ್ಧಾರಿತ ದಿನಾಂಕ/ಆವರ್ತನೆಯಲ್ಲಿ ನಿರ್ವಹಿತ ಮತ್ತೊಂದು ಖಾತೆ/ಗಳಿಗೆ ನಿರ್ಧಿಷ್ಟ ಪ್ರಮಾಣದ ಹಣವನ್ನು ವರ್ಗಾಯಿಸಲು ಬ್ಯಾಂಕಿಗೆ ಸ್ಥಾಯೀ ಸೂಚನೆಗಳನ್ನು ನೀಡಬಹುದು
- ಒಂದು ಖಾತೆಯಿಂದ ಮತ್ತೊಂದು ಬ್ಯಾಂಕಿನಲ್ಲಿ ನಿರ್ವಹಿಸುತ್ತಿರುವ ಮತ್ತೊಂದು ಖಾತೆ/ಗಳಿಗೆ ಹಣವನ್ನು ವರ್ಗಾಯಿಸಲು/ರವಾನೆಮಾಡಲು ಪೂರ್ವ-ನಿರ್ಧಾರಿತ ಆವರ್ತನೆ ಮತ್ತು ದಿನಾಂಕಗಳಂದು ಖಾತೆಯಿಂದ ಹಣಪಾವತಿಮಾಡಲು ಅಟೋಮೆಟಿಕ್ ಕ್ಲಿಯರಿಂಗ್ ಹೌಸ್ (ಎಸಿಎಚ್) ಸೂಚನೆಗಳನ್ನು ನೀಡಬಹುದು, ಇದನ್ನು ಡಿವಿಡೆಂಟ್ ಹಂಚಿಕೆ, ಬಡ್ಡಿ, ಸಂಬಳ, ಪಿಂಚಣಿಗಳಂತಹ ಪಾವತಿಗೆ ಸೂಚನೆ ನೀಡಿ ಬಳಸಬಹುದು. ಅಲ್ಲದೇ ದೂರವಾಣಿ, ವಿದ್ಯುಶ್ಚಕ್ತಿ ಬಿಲ್ ಪಾವತಿ ಅಥವಾ ಮನೆ ತೆರಿಗೆ, ನೀರಿನ ತೆರೆಗೆಗಳಂತಹ ಅಥವಾ ಹಣಕಾಸು ಸಂಸ್ಥೆಗಳು/ಬ್ಯಾಂಕ್ ಸಾಲದ ಕಂತಿನ ಪಾವತಿ ಅಥವಾ ವ್ಯಕ್ತಿಗಳ ನಿಯಮಿತ ಹೂಡಿಕೆಗಳ ಪಾವತಿಗಳಂತಹ ಉದ್ದೇಶಗಳಿಗೂ ಬಳಸಬಹುದು

**ಹಣ ರವಾನೆ ಸೇವೆಗಳು**

- ಗ್ರಾಹಕರು ಹಣವನ್ನು ಒಂದು ಕೇಂದ್ರದಿಂದ ಇನ್ನೊಂದಕ್ಕೆ ಇವುಗಳ ಮೂಲಕ ವರ್ಗಾವಣೆ ಮಾಡಬಹುದು
    - ಸಮಾನವಾಗಿ ಪಾವತಿಸಬಹುದಾದ (ಬಹು ನಗರ ಚೆಕ್ ಗಳು) ಇವುಗಳನ್ನು ಅತಿ ಶೀಘ್ರದಲ್ಲಿ ಕಲೆಕ್ಷನ್ ಮಾಡಲು ಎಲ್ಲಾ ಎಸ್ ಬ್ಯಾಂಕ್ ಶಾಖೆಗಳಲ್ಲಿ ಜಮೆಮಾಡಬಹುದು
    - 950 ಕ್ಕೂ ಹೆಚ್ಚು ಸ್ಥಳಗಳಲ್ಲಿ ಪಾವತಿಸಬಹುದಾದ ಡಿಮಾಂಡ್ ಡ್ರಾಫ್ಟ್
    - 15,000 ಸ್ಥಳಗಳಲ್ಲಿನ 90,000 ಬ್ಯಾಂಕ್ ಶಾಖೆಗಳ ಖಾತೆಗಳಿಗೆ ನ್ಯಾಶನಲ್ ಇಲೆಕ್ಟ್ರಾನಿಕ್ ಫಂಡ್ ಟ್ರಾನ್ಸಫರ್ (ಎನ್.ಇ.ಎಫ್.ಟಿ) ಪಾವತಿಗಳು
    - 15,000 ಸ್ಥಳಗಳಲ್ಲಿನ 90,000 ಬ್ಯಾಂಕ್ ಶಾಖೆಗಳ ಖಾತೆಗಳಿಗೆ ರಿಯಲ್ ಟೈಮ್ ಗ್ರಾಸ್ ಸೆಟಲ್ಮೆಂಟ್ ಟ್ರಾನ್ಸಫರ್ (ಎನ್.ಇ.ಎಫ್.ಟಿ) ಪಾವತಿಗಳು
    - ಭಾರತದಿಂದ/ಹೊರಗೆ ಹಣವನ್ನು ವರ್ಗಾವಣೆ ಮಾಡಲು ,ಪ್ರಸ್ತುತ 15 ವಿಧದ ಕರೆನ್ಸಿಗಳಲ್ಲಿ ವೈರ್ ವರ್ಗಾವಣೆಗಳು ಲಭ್ಯವಿದೆ
    - ರೂ, 50,000 ಕ್ಕಿಂತ ಕಡಿಮೆ ಹಣಕ್ಕೆ ಪ್ರತಿಯಾಗಿ ಗ್ರಾಹಕರಲ್ಲದವರಿಗೆ ಡಿಮಾಂಡ್ ಡ್ರಾಫ್ಟಗಳನ್ನು ಬ್ಯಾಂಕ್ ನೀಡಬಹುದು, ಆದರೆ ಪಾವತಿಗಳು ವೀಸಾ ಅರ್ಜಿಗಳು, ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಮತ್ತು ಶಾಸನೋಕ್ತ/ನಿಯಂತ್ರಿತ ಎಜನ್ಸಿಗಳಿಗೆ ಸೀಮಿತವಾಗಿರುತ್ತದೆ

**ನಕಲು ಡಿಮಾಂಡ್ ಡ್ರಾಫ್ಟ್/ಪಾವತಿ ಆರ್ಡರುಗಳ ನೀಡುವಿಕೆ**

- ಸಾಕಷ್ಟು ಸುಭದ್ರತೆ ಮತ್ತು ಗ್ರಾಹಕನ ಶಾಖೆಯಿಂದ ಪಾವತಿ-ರಹಿತ ಸೂಚನೆಯನ್ನು ಪಡೆದುಕೊಳ್ಳದೆಯೇ ರೂ. 5,000 ವರೆಗೆ ನಕಲು ಡಿಮಾಂಡ್ ಡ್ರಾಫ್ಟ್ ಅನ್ನು ಬ್ಯಾಂಕ್ ನೀಡಬಹುದು

- ವಿನಂತಿಯನ್ನು ಸ್ವೀಕರಿಸಿದ 15 ದಿನಗಳ ಒಳಗೆ ಗ್ರಾಹಕರಿಗೆ ನಕಲು ಡಿಮಾಂಡ್ ಡಾಪ್ಟ್ ಅನ್ನು ನೀಡುತ್ತದೆ. ಡಿಮಾಂಡ್ ಡ್ರಾಫ್ಟ್ ಅನ್ನು ಗ್ರಾಹಕರಿಗೆ ನೀಡುವಲ್ಲಿ ಮೇಲೆ ಸೂಚಿಸಿದ ಅವಧಿಗಿಂತ ಹೆಚ್ಚು ವಿಳಂಬವಾದರೆ, ಅಂತಹ ವಿಳಂಬಗಳಿಗೆ ಗ್ರಾಹಕರಿಗೆ ಪರಿಹಾರ ನೀಡಲು, ಪರಿಹಾರ ನೀತಿಯಂತೆ ಬಡ್ಡಿಯನ್ನು ಬ್ಯಾಂಕ್ ಪಾವತಿಸಬಹುದು

**ಚೆಕ್ ಕಲೆಕ್ಷನ್ ಸೇವೆಗಳು**

ಯೆಸ್ ಬ್ಯಾಂಕಿನ ಅನುಮೋದಿತ ಚೆಕ್ ಕಲೆಕ್ಷನ್ ನೀತಿಯನ್ನು ಹೊಂದಿದ್ದು, ಅದನ್ನು ಪ್ರದರ್ಶನ ಫಲಕಗಳಲ್ಲಿ ಪ್ರದರ್ಶಿಸಲಾಗಿದೆ ಮತ್ತು ವೆಬ್ ಸೈಟಿನಲ್ಲೂ ಸಹಿತ ಲಭ್ಯವಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ದಯವಿಟ್ಟು ಇತ್ತೀಚಿನ ಚೆಕ್ ಕಲೆಕ್ಷನ್ ನೀತಿಯನ್ನು ನೋಡಿ. ಚೆಕ್ ಕಲೆಕ್ಷನ್ ನೀತಿಯ ಸಾರಂಶ

- ಖಾತೆಯಲ್ಲಿ ಸಂದಾಯಮಾಡಿದ ಚೆಕ್ ಗಳ ಸಂಗ್ರಹಗಳಿಗೆ ಮುಂದಿನ ಸಮಯಾವಧಿಗಳು ಇರುತ್ತವೆ

| | ಚೆಕ್ ಪ್ರಕಾರ | ಹಣದ ಲಭ್ಯತೆ | ವಹಿವಾಟು ವಿಧ | ಟೀಕೆ-ಟಿಪ್ಪಣಿ |
|---|---|---|---|---|
| A | ಸ್ಥಳೀಯ ಚೆಕ್ - ಎಂಐಸಿಆರ್ ಕ್ಲಿಯರಿಂಗ್/ಎಂಐಸಿಆರ್ ರಹಿತ ಕ್ಲಿಯರಿಂಗ್ | ವರ್ಗಾವಣೆ ಚೆಕ್ ಗಳನ್ನು ಅದೇ ದಿನ ಜಮೆಮಾಡಲಾಗುತ್ತದೆ ( ಟಿಆರ್ಎಫ್ ಉತ್ಪನ್ನ)/ ಸ್ಥಳೀಯ ಚೆಕ್ ಗಳನ್ನು ಮರು ದಿನ ಜಮೆಮಾಡಲಾಗುತ್ತದೆ (ಎಲ್‌ಸಿಸಿ ಉತ್ಪನ್ನ) ಆಯಾ ನಗರದ ಚೆಕ್ ಮರಳಿಸುವ ಕ್ಲಿಯರಿಂಗ್ ಹೌಸ್ ಸಮಯ ಸೀಮೆಯನ್ನು ಅವಲಂಬಿಸಿ ಸ್ಪಷ್ಟ ರೂಪದ ಹಣವನ್ನು ಗ್ರಾಹಕರ ಹಿಂಪಡೆಯುವಿಕೆಗೆ ಲಭ್ಯಗೊಳಿಸಲಾಗುತ್ತದೆ | ಕ್ಲಿಯರಿಂಗ್ ಹೌಸ್ | ಪ್ರಸ್ತುತ ಪಡಿಸುವ ಬ್ಯಾಂಕ್ ಮತ್ತು ಗ್ರಾಹಕರ ಬ್ಯಾಂಕ್ ಎರಡೂ ಸಹ ಸ್ಥಳೀಯ ಕ್ಲಿಯರಿಂಗ್ ಹೌಸ್ ನಿಯಮಗಳ ಪ್ರಕಾರ ಸ್ಥಳೀಯ ಕ್ಲಿಯರಿಂಗ್ ಪ್ರದೇಶದಲ್ಲಿ ನೆಲೆಸಿರಬೇಕು. |
| B | ಹೊರ ಪ್ರದೇಶದ ಚೆಕ್- ಮೆಟ್ರೊ ಸ್ಥಳಗಳಲ್ಲಿ ಸಂದಾಯಮಾಡಿರುವುದು ಮತ್ತು ಇನ್ನೊಂದು ಮೆಟ್ರೊ ನಗರದಲ್ಲಿ ಪಾವತಿ ಮಾಡುವಂತಹಹುದು (ಮುಂಬಯಿ, ಚೆನ್ನೈ, ಕೋಲ್ಕತ್ತಾ ಮತ್ತು ನವದೆಹಲಿ) | 7 ಕೆಲಸದ ದಿನಗಳು | ಕಲೆಕ್ಷನ್ ಆಧಾರ | |
| C | ಹೊರ ಪ್ರದೇಶದ ಚೆಕ್- ಮೆಟ್ರೋ ಸ್ಥಳಗಳನ್ನು ಹೊರತುಪಡಿಸಿ, ಇತರ ಯೆಸ್ ಬ್ಯಾಂಕಿನ ಸ್ಥಳಗಳಲ್ಲಿ ಪಾವತಿಸುವಂತಹುದು | 10 ಕೆಲಸದ ದಿನಗಳು | ಕಲೆಕ್ಷನ್ ಆಧಾರ | |
| D | ಹೊರ ಪ್ರದೇಶದ ಚೆಕ್- ರಾಜ್ಯದ ರಾಜಧಾನಿಗಳಲ್ಲಿ ಅಥವಾ ಮೆಟ್ರೊ ಕೇಂದ್ರಗಳಲ್ಲಿ ಪಾವತಿಸುವಂತಹವು (ಈಶಾನ್ಯ ರಾಜ್ಯಗಳು ಮತ್ತು ಸಿಕ್ಕಿಂ ಹೊರತುಪಡಿಸಿ) | 10 ಕೆಲಸದ ದಿನಗಳು | ಕಲೆಕ್ಷನ್ ಆಧಾರ | |
| E | ಹೊರ ಪ್ರದೇಶದ ಚೆಕ್- ಯೆಸ್ ಬ್ಯಾಂಕಿನ ಶಖೆಯನ್ನು ಹೊಂದಿಲ್ಲದ ಸ್ಥಳಗಳಲ್ಲಿ ಪಾವತಿಸುವಂತಹವು | 14 ಕೆಲಸದ ದಿನಗಳು | ಕಲೆಕ್ಷನ್ ಆಧಾರ | |

**ನಿಯಮಗಳು**

- ಹಣ ನಿರ್ವಹಣೆ ವ್ಯವಸ್ಥೆಯ ಸಂದರ್ಭದಲ್ಲಿ ಸಂದಾಯ ಸಮಯಾವಧಿಯು ಬದಲಾಗಬಹುದು ಮತ್ತು ಇದು ಒಪ್ಪಿದ ವ್ಯವಸ್ಥೆಯ ಅನುಸಾರ ಅನ್ವಯಿಸಲ್ಪಡುತ್ತದೆ
- ಅಂತಿಮ ಸಮಯಾವಧಿಯೊಳಗೆ ಶಾಖೆ ಕೌಂಟರುಗಳಲ್ಲಿ ಮತ್ತು ಶಾಖೆ ಆವರಣದ ಕಲೆಕ್ಷನ್ ಪೆಟ್ಟಿಗೆಗಳಲ್ಲಿ ಜಮೆಮಾಡಿದ ಎಲ್ಲಾ ಸ್ಥಳೀಯ ಚೆಕ್ ಗಳನ್ನು ಅದೇ ದಿನ ಕ್ಲಿಯರಿಂಗ್ ಮಾಡಲು ಪ್ರಕ್ರಿಯೆಗೊಳಿಸಲಾಗುವುದು
- ಅಂತಿಮ ಸಮಯಾವಧಿಯ ನಂತರ ಮತ್ತು ದೂರದ ಎಟಿಯಂ ಗಳನ್ನು ಸೇರಿಸಿ ಶಾಖೆಯ ಆವರಣದ ಹೊರಗೆ ಜಮೆ ಮಾಡಿದ ಚೆಕ್ ಗಳನ್ನು ಮುಂದಿನ ಕ್ಲಿಯರಿಂಗ್ ಆವರ್ತನೆಯ ಅವಧಿಯಲ್ಲಿ ಸಲ್ಲಿಸಲಾಗುವುದು
- ಪ್ರತಿ ಶಾಖೆಯಲ್ಲಿ ನಿರ್ಧಿಷ್ಟ ಪಡಿಸಿದ ಅಂತಿಮ ಸಮಯವು ಸಾಮಾನ್ಯವಾಗಿ ಕ್ರಮಾಗತ ಕ್ಲಿಯರಿಂಗ್ ಹೌಸ್ ಸಮಯದ ಎರಡು ಗಂಟೆಗಳ ಮೊದಲು ಆಗಿರುತ್ತದೆ ಮತ್ತು ಪ್ರತಿ ಶಾಖೆಗಳಲ್ಲಿ ಅದನ್ನು ಪ್ರದರ್ಶಿಸಲಾಗುತ್ತದೆ
- ಹೊರ ಪ್ರದೇಶದ ಚೆಕ್ ಗಳನ್ನು (ಯೆಸ್ ಬ್ಯಾಂಕಿನ ಲಿಮಿಟೆಡ್ ಕ್ಲಿಯರಿಂಗ್ ಸೌಲಭ್ಯವನ್ನು ಹೊಂದಿಲ್ಲದ ಕಡೆ) ಕಲೆಕ್ಷನ್ ಆಧಾರದ ಮೇಲೆ ಕಳುಹಿಸಲಾಗುತ್ತದೆ
- ವಿವಿಧ ಸ್ಥಳಗಳಲ್ಲಿ ಕ್ಲಿಯರಿಂಗ್ ಸಮಯದ ಪ್ರಕಾರ ಹಣವು ತೆರವಾದಂತೆಯೇ, ಆ ಪ್ರಕಾರವಾಗಿ ಗ್ರಾಹಕರು ಸಾಕಷ್ಟು ಹಿಂಪಡೆಯುವ ಶಿಲ್ಕಗೆ ಒಳಪಟ್ಟು ಮುಂದಿನ ಕ್ರಮಗಳನ್ನು ಕೈಕೊಳ್ಳಬಹುದು

ಮೇಲಿನ ಮಾರ್ಗಸೂಚಿಗಳು ಯೆಸ್ ಬ್ಯಾಂಕಿನ ವಿಸ್ತೃತ ಚೆಕ್ ಕಲೆಕ್ಷನ್ ನೀತಿಯ ಪ್ರಕಾರವಾಗಿರುತ್ತವೆ.ನೀತಿಯ ಸಮಯದಲ್ಲಿ ಸಮಯಕ್ಕೆ ಪರಿಷ್ಕರಣೆಗೆ ಒಳಪಟ್ಟಿರುತ್ತದೆ. ಆದ್ದರಿಂದ ನೀವು ವೆಬ್ ಸೈಟಿನಲ್ಲಿ ಲಭ್ಯವಿರುವ ಇತ್ತೀಚಿನ ಚೆಕ್ ಕಲೆಕ್ಷನ್ ನೀತಿಯನ್ನು ನೋಡಲು ಸಲಹೆ ನೀಡಲಾಗುತ್ತದೆ.

**ತಕ್ಷಣದ ಜಮಾ ಸೌಲಭ್ಯ**

ತಕ್ಷಣದ ಚೆಕ್ ಕಲೆಕ್ಷನ್ ಕುರಿತಂತೆ ನಮ್ಮ ನೀತಿಯ ಬಗ್ಗೆ ಹೆಚ್ಚಿನ ವಿವರಣೆಗಾಗಿ ನಮ್ಮ ಚೆಕ್ ಕಲೆಕ್ಷನ್ ನೀತಿಯನ್ನು ಉಲ್ಲೇಖ ಮಾಡಿ. ನಮ್ಮ ಚೆಕ್ ಕಲೆಕ್ಷನ್ ನೀತಿಯನ್ನು ಪ್ರದರ್ಶನ ಫಲಕದಲ್ಲಿ ಪ್ರದರ್ಶಿಸಲಾಗಿದೆ ಮತ್ತು ವೆಬ್-ಸೈಟ್ ನಲ್ಲೂ ಸಹ ಲಭ್ಯವಿದೆ.

**ಹಳೆಯ/ಸ್ವಲ್ಪ ಹರಿದ ಕರೆನ್ಸಿ ನೋಟುಗಳ ವಿನಿಮಯ**

ನೈಜವಾಗಿರುವ ಮತ್ತು ಶಂಕೆ ಹಾಗೂ ಮೋಸಕ್ಕೆ ಕಾರಣವಾಗದ ಮತ್ತು ಇತರೆ ಪ್ರಕಾರದ ಹರಿದ ಎಲ್ಲಾ ದರದ ಕರೆನ್ಸಿ ನೋಟುಗಳನ್ನು ಈ ಕುರಿತ ಆರ್.ಬಿ.ಐ ಮಾರ್ಗದರ್ಶಿಯ ಅನುಸಾರ ಹಳೆಯ/ಸ್ವಲ್ಪ ಹರಿದ ಕರೆನ್ಸಿ ನೋಟುಗಳನ್ನು ನಮ್ಮ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಸ್ವೀಕರಿಸಲಾಗುವುದು

**ಸುರಕ್ಷಿತ ಬ್ಯಾಂಕಿಂಗ್ ಅನುಭವಕ್ಕಾಗಿ ಉತ್ತಮ ಗ್ರಾಹಕರ ಅಭ್ಯಾಸಗಳು**

- ಚೆಕ್ ಪುಸ್ತಕ/ಪಾಸ್ ಪುಸ್ತಕಗಳನ್ನು ಸುರಕ್ಷಿತವಾಗಿರಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಿ
- ಚೆಕ್ ಅನ್ನು ಬರೆಯುವಾಗ ಆದ್ಯತೆಯಾಗಿ ಹಿಂಬದಿಯ ಕಾರ್ಬನ್ ಅನ್ನು ಬಳಸಿ
- ಸಾಧ್ಯವಾದಷ್ಟೂ ಮಟ್ಟಿಗೆ ಕ್ರಾಸ್ ಮಾಡಿದ/ಅಕೌಂಟ್ ಪಾವತಿಯ ಚೆಕ್ ಗಳನ್ನು ನೀಡಿ.
- ಚೆಕ್ ಅನ್ನು ನೀಡುವ ಮೊದಲು ದಿನಾಂಕ, ಪದಗಳಲ್ಲಿ ಮತ್ತು ಸಂಖ್ಯೆಗಳಲ್ಲಿ ಮೊತ್ತದ ವಿವರ, ಕ್ರಾಸ್ ಮಾಡಿರುವ ಹಾಗೂ ಇತರ ವಿವರಗಳನ್ನು ಪರಿಶೀಲಿಸಿ. ಸಾಧ್ಯವಾದಷ್ಟೂ ಮಟ್ಟಿಗೆ ಮೊತ್ತವನ್ನು ಹತ್ತಿರದ ರೂಪಾಯಿ ಮೌಲ್ಯಕ್ಕೆ ಪೂರ್ಣಗೊಳಿಸಿದ ನಂತರವೇ ನೀಡಿ.
- ಖಾತೆ ಪ್ರಕಾರಕ್ಕಾಗಿ ಅಗತ್ಯವಿರುವ ಕನಿಷ್ಠ ಸಾಮಾನ್ಯ ಶಿಲ್ಕನ್ನು ಕಾಪಾಡಿಕೊಳ್ಳಿ
- ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಚೆಕ್ ಗಳನ್ನು ನೀಡಬೇಡಿ, ಇದು ನೆಗೋಷಿಯೇಬಲ್ ಇನಸ್ಟ್ರುಮೆಂಟ್ ಕಾಯಿದೆ ಅನುಸಾರ ಅಪರಾಧವಾಗುತ್ತದೆ
- ಯಾವುದೇ ಸಾಯಿ ಸೂಚನೆಗಳು/ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳ ಹಣ ಪಾವತಿಗೆ ವಾಯಿದೆ ದಿನಾಂಕದಂದು ಖಾತೆಯಲ್ಲಿ ಕಡ್ಡಾಯವಾಗಿರುವ ಸಾಕಷ್ಟು ಶಿಲ್ಕು ಖಚಿತಪಡಿಸಿಕೊಳ್ಳಿ
- ಚೆಕ್ ಗಳು ಅಥವಾ ಇತರ ಯಾವುದೇ ಹಣಕಾಸು ದಸ್ತಾವೇಜುಗಳನ್ನು ನೋಂದಾಯಿತ ಅಂಚೆ ಅಥವಾ ಕೊರಿಯರ್ ಮುಖಾಂತರವೇ ಕಳುಹಿಸಿ
- ಖಾತೆದಾರರ ಸಾವಿನ ಸಂದರ್ಭದಲ್ಲಿ ವಾರಸುದಾರರ ಪ್ರಮಾಣಪತ್ರಕ್ಕೆ ಕೇಳದೇ ಅಥವಾ ಕಾನೂನುಬದ್ಧ ಉತ್ತರಾಧಿಕಾರಿಗಳ ಹಕ್ಕನ್ನು ಪರಿಶೀಲಿಸದೇ ಸರಳವಾದ ಬಾಕಿ ಹಣದ ಇತ್ಯರ್ಥಕ್ಕಾಗಿ ನಾಮನಿರ್ದೇಶನ ಸೌಲಭ್ಯವನ್ನು ಬಳಸಿಕೊಳ್ಳಿ. ಇದು ಇತ್ಯರ್ಥಗೊಳಿಸುವಿಕೆಯನ್ನು ಸರಳಗೊಳಿಸುತ್ತದೆ
- ಖಾತೆ ಸಂಖ್ಯೆಗಳು, ನಿಶ್ಚಿತ ಠೇವಣಿ ಹಾಗೂ ಇತರ ವಿವರಗಳನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಳ್ಳಿ
- ವಿಳಾಸ, ದೂರವಾಣಿ ಸಂಖ್ಯೆ ಹಾಗೂ ಇತರ ಬದಲಾವಣೆಗಳಿದ್ದಲ್ಲಿ, ಅದನ್ನು ತಕ್ಷಣವೇ ಸೂಕ್ತವಾದ ರುಜುವಾತುಗಳೊಡನೆ ಶಾಖೆಗೆ ಮಾಹಿತಿ ನೀಡಿ

- ಡೆಬಿಟ್/ಎಟಿಎಮ್ ಕಾರ್ಡ್, ಡಿಮ್ಯಾಂಡ್ ಡ್ರಾಫ್ಟ್, ಚೆಕ್ ಪುಸ್ತಕ/ಚೆಕ್ ಹಾಳೆಗಳು ಹಾಗೂ ಇತರವುಗಳು ಕಾಣೆಯಾದಲ್ಲಿ ತಕ್ಷಣವೇ ಶಾಖೆ/ಸಂಪರ್ಕ ಕೇಂದ್ರಕ್ಕೆ ಮಾಹಿತಿ ನೀಡಿ
- ಸ್ಥಾಯಿ ಸೂಚನೆಗಳು, ಸೇವಾ ಬಿಲ್ ಪಾವತಿ ಮತ್ತು ಎಲೆಕ್ಟ್ರಾನಿಕ್ ಕ್ಲಿಯರಿಂಗ್ ಸೇವೆಗಳ ಸೌಲಭ್ಯವನ್ನು ಪುನರಾವರ್ತಿತ ವಹಿವಾಟುಗಳು/ಪಾವತಿಗಳಿಗೆ ಪರಿಣಾಮ ಬೀರಲು ಉಪಯೋಗಿಸಿಕೊಳ್ಳಿ
- ನಮ್ಮ ಸೇವೆಗಳ ಬಗ್ಗೆ ಪ್ರತಿಕ್ರಿಯೆಯನ್ನು ನೀಡಿ ಮತ್ತು ಸೇವೆಯಲ್ಲಿ ಯಾವುದೇ ನ್ಯೂನ್ಯತೆಯನ್ನು ಶಾಖೆ/ಸಂಪರ್ಕ ಕೇಂದ್ರದ ಗಮನಕ್ಕೆ ತನ್ನಿ
- ಖಾಲಿ ಚೆಕ್ ಗಳಿಗೆ ಸಹಿ ಮಾಡಬೇಡಿ ಮತ್ತು ನಿಮ್ಮ ಚೆಕ್-ಬುಕ್/ಪಾಸ್ ಬುಕ್ ನಲ್ಲಿ ನಿಮ್ಮ ಮಾದರಿ ಸಹಿಯನ್ನು ದಾಖಲಿಸಬೇಡಿ
- ಶಾಖೆಗಳು/ಎಟಿಎಮ್ ಗಳಲ್ಲಿರುವ ಚೆಕ್ ಡ್ರಾಪ್ ಪೆಟ್ಟಿಗೆಗಳಲ್ಲಿ ನಿಗದಿತ ಸಮಯದೊಳಗೆ ಚೆಕ್ ಗಳನ್ನು ಜಮಾ ಮಾಡಿ. ಅವಧಿ ಕೊನೆಗೊಳ್ಳುವ ಸಮಯವನ್ನು ಅಂತಹ ಡ್ರಾಪ್ ಪೆಟ್ಟಿಗೆಗಳಲ್ಲಿ ಪ್ರದರ್ಶಿಸಿರಲಾಗುತ್ತದೆ
- ನಿಮ್ಮ ಡೆಬಿಟ್/ಎಟಿಎಮ್ ಕಾರ್ಡ್/ಇಂಟರ್ನೆಟ್ ಬ್ಯಾಂಕಿಂಗ್ ಪಿನ್ ಅನ್ನು ಯಾರಿಗೂ ಬಹಿರಂಗಪಡಿಸಬೇಡಿ, ಇದನ್ನು ಯಾವುದೇ ಯೆಸ್ ಬ್ಯಾಂಕಿನ ಸಿಬ್ಬಂದಿ ಅಥವಾ ಯಾವುದೇ ಎಟಿಎಮ್ ನಲ್ಲಿ ಇರುವ ಭದ್ರತಾ ಸಿಬ್ಬಂದಿಗೂ ತಿಳಿಸಬೇಡಿ
- ಯಾವುದೇ ದುರ್ಬಳಕೆಯನ್ನು ತಡೆಗಟ್ಟಲು ನಿಮ್ಮ ಕಾರ್ಡ್ ನಲ್ಲಿ ತಕ್ಷಣವೇ ಅಳಿಸಲಾಗದ ಬಾಲ್ ಪಾಯಿಂಟ್ ಪೆನ್ ನಿಂದ ಸಹಿ ಮಾಡಲು ಇರುವ ಸ್ಥಳದಲ್ಲಿ ಸಹಿ ಮಾಡಿ
- ಬ್ಯಾಂಕಿಗೆ ಡೆಬಿಟ್/ಎಟಿಎಮ್ ಕಾರ್ಡ್ ಅನ್ನು ಹಿಂತಿರುಗಿಸಬೇಕಾದಾಗ, ನೀವು ಅದನ್ನು ಬ್ಯಾಂಕಿನ ಅಧಿಕಾರಿಗಳಿಗೆ ನೀಡುವುದನ್ನು ಮತ್ತು ಹಾಗೆ ಮಾಡುವ ಮೊದಲು ಅದನ್ನು ಕತ್ತರಿಸುವುದನ್ನು ಖಚಿತಪಡಿಸಿಕೊಳ್ಳಿ
- ನಿಮ್ಮ ನೆಟ್ ಬ್ಯಾಂಕಿಂಗ್ ಪಾಸವರ್ಡ್ ನ ಕನಿಷ್ಠ ಉದ್ದವು ಎಂಟು ಅಕ್ಷರಗಳಾಗಿರಬೇಕು. ನಿಮ್ಮ ಪಾಸವರ್ಡ್ ಗಳು/ಪಿನ್ ಕಠಿಣವಾಗಿರಬೇಕು ಮತ್ತು ಇತರರು ಊಹಿಸದಂತಿರಬೇಕು. ನಿಮ್ಮ ಪಾಸವರ್ಡ್ ನಲ್ಲಿ ದೊಡ್ಡಕ್ಷರ, ಚಿಕ್ಕಕ್ಷರದ ವರ್ಣಮಾಲೆಗಳು ಮತ್ತು ಸಂಖ್ಯೆಗಳ ಸಂಯೋಜನೆಯನ್ನು ಬಳಸಿ.
- ಪ್ರಲೋಭನೆಗೊಳಿಸುವ ವಿಷಯದೊಂದಿಗಿನ 'ವಂಚನೆಯ' ವೆಬ್-ಸೈಟ್ ಗಳು ಅಥವಾ ವೈಯಕ್ತಿಕ ಮಾಹಿತಿಯನ್ನು ಕೇಳುವ ಇ-ಮೇಲ್ ಗಳ ಬಗ್ಗೆ ಎಚ್ಚರಿಕೆಯಿಂದಿರಿ. ದುರ್ಬಳಕೆಯನ್ನು ತಪ್ಪಿಸಲು ಕೆಲವು ಉತ್ತಮ ಅಭ್ಯಾಸಗಳು ಈ ರೀತಿಯಾಗಿದೆ –
  - ಇಮೇಲ್ ನಲ್ಲಿಯೇ ಲಿಂಕ್ ಅನ್ನು ಕ್ಲಿಕ್ ಮಾಡಬೇಡಿ – ಬ್ರೌಸರ್ ನಲ್ಲಿಯೇ ಯು.ಆರ್.ಎಲ್ ಅನ್ನು ಬೆರಳಚ್ಚಿಸಬೇಡಿ
  - ಕಳುಹಿಸುವವರೊಂದಿಗಿನ ಶಂಕಾಸ್ಪದ ಇಮೇಲ್ ಗಳನ್ನು ದೃಢಪಡಿಸಿಕೊಳ್ಳಿ
  - ಇಮೇಲ್ ಗಳಲ್ಲಿ ಲಗತ್ತುಗಳನ್ನು ತೆರೆಯಬೇಡಿ
  - ನಿಮ್ಮ ಎಲ್ಲಾ ಖಾತೆಗಳಿಗೆ ಒಂದೇ ಪಾಸವರ್ಡ್ ಅನ್ನು ಬಳಸಬೇಡಿ
  - ನಿಮ್ಮ ಕಂಪ್ಯೂಟರ್ ನ ಫೈಲ್ ಗಳಲ್ಲಿ ನಿಮ್ಮ ಖಾತೆ ಮಾಹಿತಿ ಮತ್ತು ಪಾಸವರ್ಡ್ ಗಳನ್ನು ಸಂಗ್ರಹಿಸಿಡಬೇಡಿ

**ಹಣಕಾಸು ನಿರ್ವಹಣೆ ಸೇವೆಗಳು**

- ಯೆಸ್ ಬ್ಯಾಂಕಿನ ನಿಮ್ಮ ಹಣಕಾಸಿನ ಗುರಿಗಳನ್ನು ಸಾಧಿಸಲು ಪರಿಣಾಮಕಾರಿ ಪರಿಹಾರಗಳನ್ನು ಒದಗಿಸಲು ಸಂಶೋಧನೆಯ ಆಧಾರದ ಮೇಲೆ ವ್ಯಾಪಕ ಹೂಡಿಕೆ ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುತ್ತದೆ
- ಪೂರಕ **ಎಂ.ಎಫ್. ಆನ್ಲೈನ್** ಸೇವೆಗಳು:
  - ತೊಂದರೆ ಇಲ್ಲದ ಕಾಗದ ರಹಿತ ಹೂಡಿಕೆ
  - ಆಯ್ದ ಪ್ರಮುಖ ಫಂಡ್ ಹೌಸ್ ಗಳ ಮ್ಯೂಚುಯಲ್ ಫಂಡ್ ಯೋಜನೆಗಳಲ್ಲಿ ವ್ಯವಹಾರ
  - ಅದ್ಭುತ ಅನುಕೂಲ, ನೀವು ಒಂದು ಬಟನ್ ಕ್ಲಿಕ್ ಮಾಡುವ ಮೂಲಕ ಪ್ರವೇಶಿಸಬಹುದು, ಟ್ರ್ಯಾಕ್ ಮಾಡಬಹುದು ಮತ್ತು ವ್ಯವಹರಿಸಬಹುದು!
- ರೆಫರಲ್ ಸೇವೆಗಳ ಮೂಲಕ ಯೆಸ್ ಬ್ಯಾಂಕಿನ ಮೂರನೇ ಪಕ್ಷದ ಪೋರ್ಟಫೋಲಿಯೋ ಮ್ಯಾನೇಜಮೆಂಟ್ ಸರ್ವೀಸ್ (ಪಿಎಂಎಸ್) ಇತ್ಯಾದಿಗಳಲ್ಲಿ ಹೂಡಿಕೆ ಮಾಡಲು ಅವಕಾಶ ಒದಗಿಸುತ್ತದೆ
- ರಕ್ಷಣೆ, ಉಳಿತಾಯ ಮತ್ತು ಬಂಡವಾಳ ಹೂಡಿಕೆ, ನಿವೃತ್ತಿ ಯೋಜನೆ ಮತ್ತು ಮಕ್ಕಳ ಯೋಜನೆ ಇತ್ಯಾದಿ ಗ್ರಾಹಕರ ವಿವಿಧ ಅಗತ್ಯಗಳನ್ನು ಲೈಫ್ ಇನ್ಶುರೆನ್ಸ್ ಪೂರೈಸುತ್ತದೆ. ಈ ಉತ್ಪನ್ನಗಳನ್ನು ಮ್ಯಾಕ್ಸ್ ಲೈಫ್ ಇನ್ಶುರೆನ್ಸ್ ಕಂಪೆನಿ ಲಿಮಿಟೆಡ್ ಸಹಯೋಗದೊಂದಿಗೆ ನೀಡಲಾಗುತ್ತದೆ
- ಜನರಲ್ ಇನ್ಶುರೆನ್ಸ್ ಸೊಲ್ಯೂಶನ್ಸ್ ಗ್ರಾಹಕರ ವಿವಿಧ ಅಗತ್ಯಗಳಾದ ಆರೋಗ್ಯ ವಿಮೆ, ಮೋಟಾರು ವಿಮೆ, ಪ್ರಯಾಣ ವಿಮೆ, ಮನೆ ಮತ್ತು ಆಸ್ತಿ ವಿಮೆ ಮುಂತಾದವುಗಳನ್ನು ಪೂರೈಸುತ್ತದೆ. ಈ ಉತ್ಪನ್ನಗಳನ್ನು ಬಜಾಜ್ ಅಲಿಯಾನ್ಸ್ ಜನರಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಸಹಯೋಗದೊಂದಿಗೆ ನೀಡಲಾಗುತ್ತದೆ

**ಡೆಪಾಸಿಟರಿ ಸೇವೆಗಳು**

- ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್.ಎಸ್.ಡಿ.ಎಲ್) ನೊಂದಿಗೆ ಯೆಸ್ ಬ್ಯಾಂಕಿನ ಡೆಪಾಸಿಟರಿ ಸಹಯೋಗಿಯಾಗಿದೆ.
- ಅನಿವಾಸಿ ಭಾರತೀಯರು ಪೋರ್ಟ್-ಫೋಲಿಯೋ ಇನವೆಸ್ಟ್ ಮೆಂಟ್ ಸ್ಕೀಮ್ (ಪಿಐಎಸ್) ಅಡಿಯಲ್ಲಿ ಹಿಂತಿರುಗಿಸುವ ಮತ್ತು ಹಿಂತಿರುಗಿಸಲಾಗದ ಬಂಡವಾಳ ಪತ್ರಗಳಿಗೆ ಪ್ರತ್ಯೇಕ ಖಾತೆಗಳನ್ನು ತೆರೆಯಬೇಕಾಗುತ್ತದೆ.
- ಡಿಮ್ಯಾಟ್ ಖಾತೆಗಳನ್ನು ತೆರೆಯಲು ಪ್ಯಾನ್ ಕಾರ್ಡ್ ಕಡ್ಡಾಯವಾಗಿದೆ.

- ಡಿಮ್ಯಾಟ್ ಖಾತೆಗಳನ್ನು ನಿರ್ವಹಣೆ ಮಾಡಲು ಯಾವುದೇ ಕನಿಷ್ಠ ಬಂಡವಾಳ ಪತ್ರಗಳ ಅಗತ್ಯವಿರುವುದಿಲ್ಲ
- ವೈಯಕ್ತಿಕ ನೆಲೆಯಲ್ಲಿ ತೆರೆದ ಖಾತೆಗಳಿಗೆ (ಅಂದರೆ ಏಕ/ಜಂಟಿ ಖಾತೆಗಳು ಜೊತೆಗೆ ಏಕ ಮಾಲಿಕತ್ವದ ವ್ಯಾಪಾರಿ ಸಂಸ್ಥೆಗಳ ಖಾತೆಗಳು) ಮಾತ್ರ ನಾಮ ನಿರ್ದೇಶನ ಸೌಲಭ್ಯವನ್ನು ಹೊಂದಿರುತ್ತವೆ. ಪ್ರತಿನಿಧಿತ್ವ ಹೊಂದಿದ ಖಾತೆಗಳಿಗೆ ಅಲ್ಲ
- ನಿಯಂತ್ರಕ ಮಾರ್ಗಸೂಚಿಗಳ ಪ್ರಕಾರ, ಎಲ್ಲಾ ವೈಯಕ್ತಿಕ ಖಾತೆಗಳಿಗೆ ನಾಮನಿರ್ದೇಶನ ವಿವರಗಳನ್ನು ಒದಗಿಸುವುದು ಅಥವಾ ನಾಮನಿರ್ದೇಶನ ಸೌಲಭ್ಯವನ್ನು ಪಡೆಯಲು ನೀವು ಬಯಸುವುದಿಲ್ಲ ಎಂದು ಸ್ಪಷ್ಟವಾಗಿ ಘೋಷಿಸುವುದು ಕಡ್ಡಾಯವಾಗಿರುತ್ತದೆ
- ಯಾವುದೇ ಗ್ರಾಹಕ ತನ್ನ ಖಾತೆಯ ಮೂಲಕ ನಿರಂತರವಾಗಿ 180 ದಿನಗಳ ವರೆಗೆ ಯಾವುದೇ ವ್ಯವಹಾರ ಮಾಡದಿದ್ದಲ್ಲಿ ಆ ಖಾತೆಯನ್ನು ನಿಷ್ಕ್ರಿಯ ಖಾತೆಯೆಂದು ಪರಿಗಣಿಸಲಾಗುತ್ತದೆ

**ಸಣ್ಣ ಉದ್ಯಮ ಸಾಲ ಯೋಜನೆಗಳು**

- ಸುರಕ್ಷಿತವಲ್ಲದ ಉದ್ಯಮ ಸಾಲುಗಳನ್ನು ಉದ್ಯಮ ಸಂಸ್ಥೆಗಳಿಗೆ ಅದರ ಕಾರ್ಯನಿರ್ವಹಣೆ ಬಂಡವಾಳ, ಆಸ್ತಿ ಕಲೆಕ್ಷನ್ ಮತ್ತು ವ್ಯವಹಾರದ ಅಗತ್ಯತೆಗಳಿಗೆ ನೀಡಲಾಗುತ್ತದೆ
- ಸಾಲುಗಳು ಮಾಲಿಕತ್ವದ, ಪಾಲುದಾರಿಕೆಯ, ಖಾಸಗಿ ಮತ್ತು ಪರಿಮಿತ ಲಿಮಿಟೆಡ್ ಕಂಪನಿಗಳಿಗೆ ಸರಳವಾದ ದಾಖಲೆ ಪತ್ರಗಳು ಮತ್ತು ಸ್ಪಷ್ಟ ಅರ್ಹತೆ ಮಾನದಂಡದೊಂದಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ
- 30 ಲಕ್ಷ ರೂಪಾಯಿಗಳವರೆಗೆ ಅಂತಹ ಸಾಲಗಳ ಮುಖ್ಯ ವೈಶಿಷ್ಟ್ಯಗಳು – ಯಾವುದೇ ಜಾಮೀನು ಅಥವಾ ಭದ್ರತೆ ಅಗತ್ಯವಿಲ್ಲ; 4-7 ದಿನದೊಳಗೆ ಸಾಲ ವಿತರಣೆ; 12-36 ತಿಂಗಳ ಅವಧಿ; ಮನೆ ಬಾಗಿಲಿಗೆ ಸೇವೆ

**ಸಿ.ಎಮ್.ಎಸ್ ಪಾವತಿ ಪರಿಹಾರಗಳು**

- ಗ್ರಾಹಕೀಯಗೊಳಿಸಿದ ಎಮ್.ಐ.ಎಸ್ ಮೂಲಕ ವರ್ಧಿತ ಲಿಕ್ವಿಡಿಟಿ, ತಗ್ಗಿದ ವಾಣಿಜ್ಯ/ಇತ್ಯರ್ಥದ ಅಪಾಯ, ನಿರ್ವಹಣಾ ಸುಲಭತೆ ಮತ್ತು ಅತ್ಯುತ್ತಮ ಹಣಕಾಸು ಯೋಜನೆಯನ್ನು ಖಚಿತಪಡಿಸಿಕೊಂಡು ವ್ಯಾಪಾರ ಅಗತ್ಯತೆಗೆ ಹೊಂದಿಕೆಯಾಗುವ ಕಲೆಕ್ಷನ್ ಮತ್ತು ಪಾವತಿಗಾಗಿ ನಿಖರವಾದ ಪರಿಹಾರಗಳನ್ನು ಒದಗಿಸುತ್ತದೆ
- ಸ್ಥಳೀಯ ಸಂಗ್ರಹಣೆಗಳಿಗಾಗಿ 1000 ಕ್ಕೂ ಹೆಚ್ಚಿನ ವ್ಯಾಪಾರಿ ಕೇಂದ್ರಗಳನ್ನು ಮತ್ತು ಪರಸ್ಥಳದ ಚೆಕ್ ಗಳ ಅಪ್-ಕಂಟ್ರಿ ಸಂಗ್ರಹಣೆಗಾಗಿ 2800 ಕ್ಕೂ ಹೆಚ್ಚಿನ ಪ್ರಮುಖ ವ್ಯಾಪಾರಿ ಕೇಂದ್ರಗಳ ಮೂಲಕ ನಮ್ಮದೇ ಸ್ವಂತ ಶಾಖೆ ಮೂಲಕ ಮತ್ತು ಪತ್ರ-ವ್ಯವಹಾರ ಬ್ಯಾಂಕ್ ಟೈ-ಅಪ್ ಗಳ ಮೂಲಕ "ರಿಸಿವೇಬಲ್ ಮ್ಯಾನೇಜ್ಮೆಂಟ್ ಸರ್ವೀಸ್ ಗಳನ್ನು" ಒದಗಿಸಲಾಗುತ್ತದೆ
- ಸ್ವೀಕರಿಸಬಹುದಾದ ನಿರ್ವಹಣೆ ಸೇವೆಗಳ ಪ್ರಮುಖ ವೈಶಿಷ್ಟ್ಯಗಳೆಂದರೆ – ಮನೆ ಬಾಗಿಲಲ್ಲಿ ಪಿಕ್-ಅಪ್, ನಿರ್ದಿಷ್ಟ ಸೇವಾ ಹಂತದ ಒಪ್ಪಂದದ ಪ್ರಕಾರ ಖಚಿತ ಪಾವತಿಗಳು, ಸಮಗ್ರ ಕೊರಿಯರ್/ಸಂಯೋಜಕ ಒಪ್ಪಂದಗಳು, ಬೃಹತ್ ಅನುಗುಣವಾದ ಬ್ಯಾಂಕ್ ನೆಟವರ್ಕ್ ಗಳು, ನೇರ ಖಾತೆ ಪಾವತಿ ಸೌಲಭ್ಯ/ಫಂಡ್ ಗಳ ಪೂಲಿಂಗ್, ಗ್ರಾಹಕೀಯಗೊಳಿಸಿದ ನಿರ್ವಹಣೆ ಮಾಹಿತಿ ವ್ಯವಸ್ಥೆ, ಅಟೊ ರಿಕಾನ್; ಇತ್ಯಾದಿ
- ಗ್ರಾಹಕರ ಖಾತೆಗಳಿಗೆ ದೃಢೀಕರಣದೊಂದಿಗೆ ಅಥವಾ ದೃಢೀಕರಿಸದೆ, ಅಟೊ ರಿಕಾನ್ ಗಾಗಿ ಎಪಿಐ ಟೂಲ್ಸ್: ಇತ್ಯಾದಿ ಮೂಲಕ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ/ಐ.ಎಂ.ಪಿ.ಎಸ್ ಸಕ್ರಿಯಗೊಳಿಸಿ ನೇರ ಜಮೆಗಳನ್ನು ಇಲೆಕ್ಟ್ರಾನಿಕ್ಸ್ ಸಂಗ್ರಹಣೆಗಳನ್ನು ಒದಗಿಸುತ್ತದೆ

- ಪಾವತಿಸಬಹುದಾದ ನಿರ್ವಹಣೆ ಸೇವೆಗಳ ವ್ಯಾಪಕವಾದ ವ್ಯಾಪ್ತಿಯನ್ನು ಒದಗಿಸುತ್ತದೆ –
  - ಸೇರ್ಪಡಿತ ಎನಕ್ರಿಪ್ಶನ್ ನೊಂದಿಗೆ ದೊಡ್ಡ ಅಪಲೋಡ್ ಗಳನ್ನು ಒಳಗೊಂಡು ಎಲೆಕ್ಟ್ರಾನಿಕ್ ಪಾವತಿಗಳು
  - ವ್ಯಾಪಕ ಕವರೇಜ್ ನೊಂದಿಗೆ ಆನ್-ಲೈನ್ ಆರ್.ಟಿ.ಜಿ.ಎಸ್, ಎನ್.ಇ.ಎಫ್.ಟಿ ಕ್ರಿಯಾತ್ಮಕಗೊಳಿಸಿದ ಕಾರ್ಪೋರೇಟ್ ಪಾವತಿ ವೇದಿಕೆ
  - ಆರ್.ಟಿ.ಜಿ.ಎಸ್ – 15,000 ಸ್ಥಳಗಳಲ್ಲಿ 90,000+ ಶಾಖೆಗಳು
  - ಎನ್.ಇ.ಎಫ್.ಟಿ – 15,000 ಸ್ಥಳಗಳಲ್ಲಿ 90,000+ ಶಾಖೆಗಳು
  - ಪಾವತಿಸಬಹುದಾದ ನಿರ್ವಹಣೆ ಸೇವೆಗಳ ರಿಮೋಟ್ ಮತ್ತು ಭಾರಿ ಪ್ರಮಾಣದ ಡಿಡಿ ಮುದ್ರಣ ಪ್ರಮುಖ ವೈಶಿಷ್ಟ್ಯಗಳೆಂದರೆ – ಗ್ರಾಹಕೀಯಗೊಳಿಸಿದ ಇ.ಆರ್.ಪಿ ಸಮನ್ವಯತೆ; ಬಹು ಹಂತದ ಪ್ರಮಾಣೀಕರಣ ಮ್ಯಾಟ್ರಿಕ್ಸ್; ಸ್ವಯಂಚಾಲಿತ ಇ-ಮೇಲ್ ಸಲಹೆ; ಡೇಟಾ ಎನಕ್ರಿಪ್ಶನ್; ಸಹ-ಬ್ರಾಂಡೆಡ್ ಚೆಕ್ ಮುದ್ರಣ ಹಾಗೂ ಇನ್ನಿತರವುಗಳು
  - ಗ್ರಾಹಕ ಸೈಟ್ ಚೆಕ್ ಪ್ರಿಂಟಿಂಗ್.

**ಬಂಡವಾಳ ಮಾರುಕಟ್ಟೆಗಳು & ಎಸ್ಕ್ರಾ ಖಾತೆ ಸೇವೆಗಳು**

- ಈಕ್ವಿಟಿ ಮಾರುಕಟ್ಟೆಯಿಂದ ಬಂಡವಾಳ ಹೆಚ್ಚಿಸುವ ಚಟುವಟಿಕೆಗಳಿಗೆ ಮತ್ತು ಬಡ್ಡಿ ವಾರಂಟ್/ಡಿವಿಡೆಂಟ್ ವಾರಂಟ್ ಹಂಚಿಕೆಯ ನಿರ್ವಹಣೆಗೆ ಸಂಬಂದಿಸಿದಂತೆ ಕಾರ್ಪೋರೇಟ್ ಗಳಿಗೆ ವ್ಯವಹಾರ ಸಾಮರ್ಥ್ಯವನ್ನು ನೀಡುತ್ತದೆ
- ಬಡ್ಡಿ/ಡಿವಿಡೆಂಟ್ ಪಾವತಿ ಸೇವೆಗಳ ಪ್ರಮುಖ ವೈಶಿಷ್ಟ್ಯಗಳೆಂದರೆ –
  ಸೇವಾ ಹಂತದ ಒಪ್ಪಂದದಲ್ಲಿ ಮುಂಚಿತವಾಗಿ ಒಪ್ಪಿದ ಪ್ರಕಾರ ಎಲ್ಲಾ ಸ್ಥಳಗಳಲ್ಲಿ ಸಮಾನವಾಗಿ ವಾರಂಟ್ ಗಳನ್ನು ಗೌರವಿಸಲಾಗುತ್ತದೆ, ವಾರಂಟ್ ಗಳ ಪಾವತಿಸಿದ/ಪಾವತಿಸದೇ ಇರುವ ಸ್ಥಿತಿಯ ಲೆಕ್ಕಪಟ್ಟಿ, ಪಾವತಿ ನಿಲ್ಲಿಸುವಿಕೆ ಸೌಲಭ್ಯ, ಆನಲೈನ್, ನೈಜ-ಸಮಯದ ಎಮ್.ಐ.ಎಸ್ ಹಾಗೂ ಇತರವುಗಳನ್ನು ಒದಗಿಸುವ ಪ್ಲಾಟಫಾರ್ಮ್ ಪ್ರಕ್ರಿಯಗೊಳಿಸುವಿಕೆ ಸಾಮರ್ಥ್ಯ ಇತ್ಯಾದಿ.

- ಸೆಬಿಯೊಂದಿಗೆ ನೀಡಲು ಪರವಾನಗಿ ಹೊಂದಿರುವ ಬ್ಯಾಂಕರ್ ಆಗಿರುವ ಯೆಸ್ ಬ್ಯಾಂಕಿನ, ಪ್ರಾರಂಭಿಕ ಸಾರ್ವಜನಿಕ ನೀಡಿಕೆ (ಐಪಿಓ), ಫಾಲೋ ಆನ್ ಸಾರ್ವಜನಿಕ ನೀಡುವಿಕೆ (ಎಫ್.ಪಿ.ಓ) ಮತ್ತು ಹಕ್ಕುಗಳ ನೀಡುವಿಕೆಗೆ ಸಂಬಂಧಿಸಿದಂತೆ ಎಸ್ಕ್ರೋಕಲೆಕ್ಷನ್ ಬ್ಯಾಂಕ್ ಸೇವೆಗಳು ಮತ್ತು ಮರುಪಾವತಿ ಬ್ಯಾಂಕ್ ಸೇವೆಗಳನ್ನು ಒದಗಿಸುತ್ತದೆ. ಯೆಸ್ ಬ್ಯಾಂಕಿನ ಚಂದಾದಾರಿಕೆ ಮತ್ತು ಇಕ್ವಿಟಿ/ಡೆಟ್ ಗಾಗಿ ತನ್ನ ಎಲ್ಲ ಕೆಲಸ ಮಾಡುವ ಶಾಖೆಗಳಲ್ಲಿ ಎ.ಎಸ್.ಬಿ.ಎ. ಸೇವೆಗಳನ್ನು ಸಹಿತ ನೀಡುತ್ತದೆ
- ಎಸ್ಕ್ರೋ ಕಲೆಕ್ಷನ್ ಬ್ಯಾಂಕ್ ಸೇವೆಗಳು ಮತ್ತು ಮರುಪಾವತಿ ಬ್ಯಾಂಕ್ ಸೇವೆಗಳ ಪ್ರಮುಖ ವೈಶಿಷ್ಟ್ಯವೆಂದರೆ – ವೆಬ್ ನಲ್ಲಿ ಆನಲೈನ್ ನೈಜ ಸಮಯದ ಐಪಿಓ ಎಮ್.ಐ.ಎಸ್ ಗಾಗಿ ಭಾರತದಾದ್ಯಂತ 143 ಕಾರ್ಯನಿರ್ವಹಣೆ ವ್ಯವಹಾರ ಕೇಂದ್ರಗಳಲ್ಲಿ ಕವರೇಜ್, ಎಲ್ಲಾ ಮರುಪಾವತಿಗಳಿಗೆ ಆನಲೈನ್ ಹೊಂದಾಣಿಕೆ, ಎನ್.ಇ.ಎಫ್.ಟಿ, ಆರ್.ಟಿ.ಜಿ.ಎಸ್ ಮುಂತಾದವುಗಳ ಮುಖಾಂತರ ವೆಬ್ ನಲ್ಲಿ ಬೃಹತ್ ಪ್ರಮಾಣದ ಮರುಪಾವತಿಗಳನ್ನು ನಿರ್ವಹಿಸಲು ಸಾಮರ್ಥ್ಯ
- ಯೆಸ್ ಬ್ಯಾಂಕಿನ, ನಿಯಂತ್ರಣಾ ಮಾರ್ಗಸೂಚಿಗಳ ಪ್ರಕಾರ, ಡಿಲಿಸ್ಟಿಂಗ್, ಓಪನ್ ಆಫರ್, ಮರುಖರೀದಿ, ಷೇರು ಖರೀದಿ, ಯೋಜನಾ ಹಣಕಾಸು, ಟ್ರಸ್ಟ್ ಮತ್ತು ರಿಟೆನ್ಷನ್ ಖಾತೆಗಳು ಮತ್ತು ನೊಡಲ್ ಖಾತೆ ಸೇವೆಗಳಂತಹ ವೈವಿಧ್ಯಮಯ ಅಗತ್ಯಗಳಿಗಾಗಿ ಸಲಹಾ ಸೇವೆ ಮತ್ತು ಎಸ್ಕ್ರೊ ನಿರ್ವಹಣಾ ಸೇವೆಗಳನ್ನು ಸಹಿತ ಒದಗಿಸುತ್ತದೆ
- ಬ್ಯಾಂಕು, ಆಯಾ ಸ್ಟಾಕ್ ಎಕ್ಸ್ಚೇಂಜ್‌ಗಳಲ್ಲಿ ವ್ಯವಹರಿಸುವ ಸದಸ್ಯರಿಗಾಗಿ, ಸೆಟಲ್ಮೆಂಟ್ ಬ್ಯಾಂಕಿಂಗ್/ಕ್ಲಿಯರಿಂಗ್ ಬ್ಯಾಂಕ್ ಸೇವೆಗಳನ್ನು ಒದಗಿಸಲು ಪ್ರಮುಖ ಸ್ಟಾಕ್ ಎಕ್ಸಚೇಂಜ್‌ಗಳೊಂದಿಗೆ ದಾಖಲಿಸಿಕೊಂಡಿದೆ
- ಯೆಸ್ ಬ್ಯಾಂಕಿನ ಕಮರ್ಶಿಯಲ್ ಪೇಪರ್‌ಗಳಿಗೆ ಇಶ್ಯುಯಿಂಗ್ ಮತ್ತು ಪೇಯಿಂಗ್ ಏಜಂಟ್ ಅಗತ್ಯ ನೆರವನ್ನು ಸಹಿತ ನೀಡುತ್ತದೆ, ಪೋರ್ಟ್‌ಫೋಲಿಯೋ ಇನ್ವೆಸ್ಟಮೆಂಟ್ ಸ್ಕೀಮ್ ಅಡಿಯಲ್ಲಿ ಫಾರಿನ್ ಪೋರ್ಟ್‌ಫೋಲಿಯೋ ಇನ್ವೆಸ್ಟರುಗಳಿಗೆ (ಪಿಪಿಐಗಳು) ಸರಕಾರಿ ಸೆಕ್ಯುರಿಟಿಗಳ ಮತ್ತು ಖಾತೆಗಳ ತೀರಿಕೆಗಳಿಗೆ ಸಿಎಸ್‌ಜಿಎಲ್ ಖಾತೆ ಸೇವೆಗಳನ್ನೂ ಒದಗಿಸುತ್ತದೆ

**ವಿದೇಶೀ ವಿನಿಮಯ ಸೇವೆಗಳು**

- ಈ ಕೆಳಗಿನವುಗಳನ್ನು ಒಳಗೊಂಡು ವ್ಯಾಪಕವಾದ ಆಮದು ಮತ್ತು ರಫ್ತು ಪರಿಹಾರಗಳೊಂದಿಗೆ ಆಯ್ಕೆ ಮಾಡಿದ ಶಾಖೆಗಳಲ್ಲಿ ವಿದೇಶೀ ವ್ಯಾಪಾರ ಮತ್ತು ವ್ಯಾಪಾರ ಹಣಕಾಸು ಸೇವೆಗಳನ್ನು ಒದಗಿಸುತ್ತದೆ
    - ಮುಂಗಡ ಹಣರವಾನೆ, ನೇರ ಹಣರವಾನೆ, ಆಮದು ಕಲೆಕ್ಷನ್ ಗಳು
    - ರಫ್ತು, ಕಲೆಕ್ಷನ್, ರಫ್ತು, ಮುಂಗಡ ಪಾವತಿ, ರಫ್ತು ಕ್ರೆಡಿಟ್
    - ಕ್ರೆಡಿಟ್ ಪತ್ರಗಳು, ಬ್ಯಾಂಕ್ ಗ್ಯಾರಂಟಿ ಮತ್ತು ಕ್ರೆಡಿಟ್ ನ ಮೀಸಲು ಪತ್ರಗಳು
    - ಒಳಬರುವ ಕಳುಹಿಸಿದ ಹಣ, ಹೊರಹೋಗುವ ಹಣರವಾನೆಗಳು
    - ದೇಶೀಯ ವ್ಯಾಪಾರ ಉತ್ಪನ್ನ
    - ಸಲಹೆ ನೀಡುವುದು, ವರ್ಗಾವಣೆ, ಕ್ರೆಡಿಟ್ ನ ರಫ್ತು ಪತ್ರಗಳ ದೃಢೀಕರಣ
    - ಆಮದು ಫೈನಾನ್ಸಿಂಗ್
- ಯೆಸ್ ಬ್ಯಾಂಕಿನ ಒದಗಿಸುವ ಇತರ ಪೋರೆಕ್ಸ್ ಸೇವೆಗಳೆಂದರೆ –
    - ಎಫ್.ಸಿ.ವೈ ನಗದು ಜಮೆ, ಎಫ್.ಸಿ.ವೈ ಖಾತೆ ವರ್ಗಾವಣೆ (ಇಇಎಫ್.ಸಿ/ಆರ್.ಎಫ್.ಸಿ ಖಾತೆ)
    - ಮಲ್ಟಿ ಕರೆನ್ಸಿ ಟ್ರಾವೆಲ್ ಕಾರ್ಡ್ ನೀಡುವುದು
- ಹಣರವಾನೆ ವಹಿವಾಟುಗಳನ್ನು ಮಾಡುವಾಗ ದಾಖಲೆ ಮಾಡಲು ಮತ್ತು ಬಳಸಲು ಬೇಕಾದ ವಿವಿಧ ಕರೆನ್ಸಿಗಳಿಗಿನ ಸ್ವಿಫ್ಟ್ ಕೋಡ್ ಗಳನ್ನು ಶಾಖೆಯಿಂದ ಪಡೆದುಕೊಳ್ಳಬಹುದು
- ಬಹುತೇಕ ಎಲ್ಲಾ ವಿದೇಶೀ ಕರೆನ್ಸಿಗಳಲ್ಲಿ ವಿಶ್ವದಾದ್ಯಂತ ನಾವು ಅನುಗುಣವಾದ ಬ್ಯಾಂಕ್ ಗಳ ನೆಟವರ್ಕ್ ಅನ್ ನಾವು ಹೊಂದಿದ್ದೇವೆ

**ದೂರುಗಳ ನಿವಾರಣೆ**

ದಯವಿಟ್ಟು ನಮ್ಮ ವೆಬ್ ಸೈಟ್ ನಲ್ಲಿ ಲಭ್ಯವಿರುವ ದೂರು ನಿವಾರಣಾ ನೀತಿಯನ್ನು ಓದಿ: www.yesbank.in